www.janavaadi.in

# ಜನವಾದಿ

ರಾಯಚೂರು
ಕಲಬುರಗಿ
ಯಾದಗಿರಿ
ಕೊಪ್ಪಳ
ಬಳ್ಳಾರಿ
ಬೀದರ್

ಸಂಪಾದಕ : ಬಸವರಾಜ ಹೆಚ್
Editor : Basavaraj H

ಜನರ ಅಂತರಂಗದ ಧ್ವನಿ
ಕನ್ನಡ ದಿನಪತ್ರಿಕೆ

JANAVAADI
Kannada Daily News Paper

ಸಂಪುಟ : 12 ಸಂಚಿಕೆ : 152 ಪುಟ : 4 ರಾಯಚೂರು ಗುರುವಾರ 08-01-2026 RNI NO.KARKAN/2012/56428 ಮೊಬೈಲ್: 9448300139,9449711232. e-mail : janavaadi@gmail.com ಬೆಲೆ : 2 ರೂ.
VOLUME : 12 ISSUE : 152 PAGES : 4 RAICHUR THURSDAY 08-01-2026 RNI NO.KARKAN/2012/56428 MOBILE:9448300139,9449711232. E-MAIL:janavaadi@gmail.com PRICE : 2 RS.

## ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ: ಅಪರಾಧಿಗೆ 20 ವರ್ಷ ಜೈಲು

ಜನವಾದಿ ವಾರ್ತೆ

ಸಿಂಧನೂರು ಜ 07 – ತಾಲೂಕಿನ ತುರವಿಹಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಅಪ್ರಾಪ್ತ ಬಾಲಕಿಯ ಮೇಲಿನ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಾಧಿಗೆ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಪೋಕ್ಸೋ ನ್ಯಾಯಾಲಯವು 20 ವರ್ಷ ಕಠಿಣ ಶಿಕ್ಷೆ ಹಾಗೂ 15 ಸಾವಿರ ರೂ.ಗಳ ದಂಡ ವಿಧಿಸಿ ಆದೇಶಿಸಿದೆ.

ಮಸ್ಕಿ ತಾಲೂಕಿನ ಅಂಕನಾಳ ಗ್ರಾಮದ ಹನುಮಂತ ಪೂಜಾರಿ ಎನ್ನುವ ಆರೋಪಿ ಶಿಕ್ಷೆಗೆ ಗುರಿಯಾಗಿದ್ದಾನೆ. ಬಾಲಕಿಯ ತಂದೆ ನೀಡಿದ ದೂರು ಆಧರಿಸಿ ಅಂದಿನ ಆರಕ್ಷಕ ನಿರೀಕ್ಷಕ ವೀರಾರೆಡ್ಡಿ ನ್ಯಾಯಾಲಯದಲ್ಲಿ ದೋಷಾರೋಪಣೆ ಪತ್ರ ಸಲ್ಲಿಸಿದ್ದರು. ಅತ್ಯಾಚಾರ ಸಾಬೀತಾದ ಹಿನ್ನಲೆಯಲ್ಲಿ ಆರೋಪಿಗೆ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಪೋಕ್ಸೋ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಬಿ.ಜಕಾತಿ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಸರಕಾರದಿಂದ ನೊಂದ ಬಾಲಕಿಗೆ 7.5 ಲಕ್ಷ ರೂ.ಗಳ ಪರಿಹಾರ ನೀಡಬೇಕು ಎಂದು ಆದೇಶಿಸಿದ್ದಾರೆ.

ಸರಕಾರದ ಪರವಾಗಿ ವಿಶೇಷ ಸರಕಾರಿ ಅಭಿಯೋಜಕ ಎಂ.ಮಂಜುನಾಥ ಸ್ವಾಮಿ ವಾದ ಮಂಡಿಸಿದ್ದರು.

### ರಾಯಚೂರು ಪೇಟೆ ದರ

**ಸಣ್ಣ ಭತ್ತ(ಸೋನಾ)**
ಕನಿಷ್ಠ : 1979
ಗರಿಷ್ಠ : 2730

**ಒಣಕಡಲೆ**
ಕನಿಷ್ಠ : –
ಗರಿಷ್ಠ : –

**ಕೆಂಪು ತೊಗರಿ**
ಕನಿಷ್ಠ : 6111
ಗರಿಷ್ಠ : 7660

**ಶೇಂಗಾ (ಗುಂಗ್ರು)**
ಕನಿಷ್ಠ : 6503
ಗರಿಷ್ಠ : 7829

**ಸೂರ್ಯಕಾಂತಿ**
ಕನಿಷ್ಠ : –
ಗರಿಷ್ಠ : –

**ಈರುಳ್ಳಿ**
ಕನಿಷ್ಠ : 750
ಗರಿಷ್ಠ : 1940

## ಮುಖ್ಯಮಂತ್ರಿಗಳ ಅಧಿಕಾರಾವಧಿಯನ್ನು ಸಂಖ್ಯೆಯಿಂದಲ್ಲ, ಗುಣಮಟ್ಟದಿಂದ ನಿರ್ಣಯಿಸಬೇಕು: ಸಂಸದ ಬೊಮ್ಮಾಯಿ



ಗದಗ ಜ 7– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕಾರಾವಧಿಯನ್ನು ಸಂಖ್ಯೆಯಿಂದಲ್ಲದೆ, ಆಡಳಿತದ ಗುಣಮಟ್ಟದ ದೃಷ್ಟಿಯಿಂದ ನಿರ್ಣಯಿಸಬೇಕು ಎಂದು ಬಿಜೆಪಿ ಸಂಸದ ಮತ್ತು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಗಳವಾರ ಹೇಳಿದ್ದಾರೆ.

ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಎಷ್ಟು ದಿನ ಮುಖ್ಯಮಂತ್ರಿಯಾಗಿದ್ದಾರೆ ಎಂಬುದರ ಬದಲು, ಆ ಅವಧಿಯಲ್ಲಿ ಅವರು ಏನು ಸಾಧಿಸಿದ್ದಾರೆ, ರಾಜ್ಯವನ್ನು ಹೇಗೆ ಮುಂದಕ್ಕೆ ಕೊಂಡೊಯ್ದಿದ್ದಾರೆ, ಅವರ ಆಡಳಿತದಲ್ಲಿ ಎಷ್ಟು ಬಡ ಮತ್ತು ಹಿಂದುಳಿದ ವರ್ಗಗಳು ಪ್ರಯೋಜನ ಪಡೆದಿವೆ ಮತ್ತು ಒಟ್ಟಾರೆಯಾಗಿ ರಾಜ್ಯದ ಆರ್ಥಿಕತೆ ಎಷ್ಟು ಸುಧಾರಿಸಿದೆ ಎಂಬುದು ಮುಖ್ಯ.ಇವು ಚರ್ಚಿಸಬೇಕಾದ ವಿಷಯಗಳು. ಚರ್ಚೆಯು ಗುಣಮಟ್ಟದ ಬಗ್ಗೆಯಾಗಬೇಕೇ ಹೊರತು ಸಂಖ್ಯೆಯ ಬಗ್ಗೆಯಲ್ಲ ಎಂದು ಹೇಳಿದ್ದಾರೆ.

ಇದೇ ವೇಳೆ ಬಳ್ಳಾರಿ ಘರ್ಷಣೆ ಪ್ರಕರಣ ಕುರಿತು ಮಾತನಾಡಿದ ಅವರು, ಬೀದರ್ ಮತ್ತು ಬಳ್ಳಾರಿಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಉತ್ತಮವಾದುದಲ್ಲ. ಪ್ರಜಾಪ್ರಭುತ್ವದಲ್ಲಿ, ಅಭಿಪ್ರಾಯ ಭಿನ್ನಾಭಿಪ್ರಾಯಗಳು ಸಹಜ, ಆದರೆ ಅವುಗಳನ್ನು ಗೌರವಯುತ ಚೌಕಟ್ಟಿನೊಳಗೆ ವ್ಯಕ್ತಪಡಿಸಬೇಕು. ಅದನ್ನು ಮೀರಿ ಹೋಗುವುದು ಒಳ್ಳೆಯದಲ್ಲ ಎಂದು ತಿಳಿಸಿದರು.

ಬಳ್ಳಾರಿ ಘಟನೆಯು ಕ್ರಿಮಿನಲ್ ಕೃತ್ಯ. ಗುಂಡು ಹಾರಿಸಿದವರು ಯಾರು ಎಂಬುದು ಈಗಾಗಲೇ ತಿಳಿದಿದೆ. ಗುಂಡು ಹಾರಿಸಲು ಅವರನ್ನು ಯಾರು ಪ್ರಚೋದಿಸಿದರು ಎಂಬುದನ್ನು ಪತ್ತೆಹಚ್ಚುವುದು ಮತ್ತು ಅವರನ್ನು ಬಂಧಿಸುವುದು ಮುಖ್ಯ. ಆಗ ಮಾತ್ರ, ಘಟನೆಯ ಹಿಂದಿನ ಪಿತೂರಿ ಬೆಳಕಿಗೆ ಬರುತ್ತದೆ. ಒಬ್ಬರ ಮನೆ ಮುಂದೆ ಗದ್ದಲ ಸೃಷ್ಟಿಸಿ, ಗುಂಡು ಹಾರಿಸುವ ಮಟ್ಟಕ್ಕೆ ವಿಷಯಗಳು ಉಲ್ಬಣಗೊಳ್ಳುತ್ತಿದ್ದರೆ, ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ ಎಂದರ್ಥ ಎಂದು ಹೇಳಿದರು.

ಮೃತ ಕಾಂಗ್ರೆಸ್ ಕಾರ್ಯಕರ್ತನ ಶವವನ್ನು ಎರಡು ಬಾರಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗಿದೆ ಎಂಬ ಆರೋಪದ ಕುರಿತು ಮಾತನಾಡಿ, ಅಲ್ಲಿ ನಡೆದ ಘಟನೆ, ಆ ಸಮಯದಲ್ಲಿ ಪೊಲೀಸರು ವರ್ತಿಸಿದ ರೀತಿ, ಸ್ಥಳದಲ್ಲಿ ಕಂಡುಬಂದ ಗುಂಡುಗಳು ಮತ್ತು ನಂತರ ತನಿಖೆ ನಡೆಯುತ್ತಿರುವ ರೀತಿಯನ್ನು ಗಮನಿಸಿದರೆ, ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿದೆ ಎಂದು ತೋರುತ್ತದೆ. ಎರಡು ಬಾರಿ ಮರಣೋತ್ತರ ಪರೀಕ್ಷೆ ನಡೆಸಿರುವುದು ಹಲವು ಅನುಮಾನಗಳನ್ನು ಹುಟ್ಟುಹಾಕಿದೆ ಎಂದರು.

## ಸುಮಲತಾ ಅಂಬರೀಷ್ ರಾಜ್ಯ ರಾಜಕಾರಣಕ್ಕೆ ಎಂಟ್ರಿ




ಬೆಂಗಳೂರು ಜ 7– ಮಾಜಿ ಸಂಸದೆ ಸುಮಲತಾ ಅಂಬರೀಷ್ ಅವರು ರಾಜ್ಯ ರಾಜಕಾರಣಕ್ಕೆ ಬರುವ ಇಂಗಿತ ವ್ಯಕ್ತಪಡಿಸಿದ್ದಾರೆ. ಪಕ್ಷದ ಹೈಕಮಾಂಡ್ ನಿರ್ದೇಶನದ ಪ್ರಕಾರ ನಡೆದುಕೊಳ್ಳುತ್ತೇನೆ ಎಂದಿದ್ದಾರೆ.

**ರಾಜ್ಯ ನಾಯಕರ ಜತೆ ಚರ್ಚೆ ನಡೆಸುವೆ**

ಇಂದು ಬೆಂಗಳೂರಿನಲ್ಲಿ ಬಿಜೆಪಿ ಕಚೇರಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ತಮ್ಮ ಮುಂದಿನ ರಾಜಕೀಯ ಭವಿಷ್ಯ ಕುರಿತು ಪಕ್ಷದ ಹೈಕಮಾಂಡ್ ಮತ್ತು ರಾಜ್ಯ ನಾಯಕರು ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದರು. ಮುಂದಿನ ಚುನಾವಣೆಯ ವಿಚಾರದಲ್ಲಿ ಹೈಕಮಾಂಡ್ ಹಾಗೂ ಪಕ್ಷದ ನಾಯಕರು ಏನು ತೀರ್ಮಾನ ಮಾಡುತ್ತಾರೋ ಅದಕ್ಕೆ ನಾನು ಬದ್ಧಳಾಗಿರುತ್ತೇನೆ. ನಾನೂ ಸಹ ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತೇನೆ. ಮುಂದಿನ ದಿನಗಳಲ್ಲಿ ಹೈಕಮಾಂಡ್ ಮತ್ತು ರಾಜ್ಯ ನಾಯಕರ ಜತೆ ಚರ್ಚೆ ನಡೆಸುವ ಉದ್ದೇಶವಿದೆ ಎಂದರು.

**ರಾಜ್ಯ ರಾಜಕಾರಣಕ್ಕೆ ಪ್ರವೇಶಿಸುವ ಕುರಿತು ವಿರೋಧವಿಲ್ಲ**

ರಾಜ್ಯ ರಾಜಕಾರಣಕ್ಕೆ ಪ್ರವೇಶಿಸುವ ಕುರಿತು ಯಾವುದೇ ವಿರೋಧವಿಲ್ಲ. ಸಮಯ, ಸಂದರ್ಭ ಎಲ್ಲವೂ ಕೂಡಿಬಂದಾಗ ಎಲ್ಲವೂ ಸಾಧ್ಯ. ಜಿಲ್ಲೆಯ ಮಟ್ಟದಲ್ಲಿ ಪಕ್ಷದಿಂದ ನಡೆಯುವ ಹೋರಾಟಗಳು, ಸಭೆಗಳು ಮತ್ತು ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸುತ್ತಾ ಬಂದಿದ್ದೇನೆ. ಮಂಡ್ಯ ಜಿಲ್ಲೆಯಲ್ಲಿ ಪಕ್ಷವನ್ನು ಕೆಳಮಟ್ಟದಿಂದ ಗಟ್ಟಿಗೊಳಿಸಲು ಎಲ್ಲರೂ ಒಗ್ಗಟ್ಟಾಗಿ ಶ್ರಮಿಸಬೇಕಿದೆ ಎಂದು ಹೇಳಿದರು.

ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವ ವಿಚಾರಕ್ಕೂ ತಮ್ಮ ವಿರೋಧವಿಲ್ಲ, ಅಂತಿಮ ತೀರ್ಮಾನವನ್ನು ಹೈಕಮಾಂಡ್ ನಾಯಕರು ಕೈಗೊಳ್ಳಬೇಕು. ಜಿಲ್ಲೆಯಲ್ಲೀಗ ಬಿಜೆಪಿ ಮತಗಳಿಕೆ ಪ್ರಮಾಣವೂ ಹೆಚ್ಚಾಗಿದೆ. ಪಕ್ಷ ಸಂಘಟನೆ ಸರಿಯಾದ ದಿಕ್ಕಿನಲ್ಲಿ ಸಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬಳ್ಳಾರಿಯಲ್ಲಿ ನಡೆದ ಇತ್ತೀಚಿನ ದುರ್ಘಟನೆ ಕುರಿತು ಮಾತನಾಡಿದ ಸುಮಲತಾ, ಬಳ್ಳಾರಿ ಘಟನೆ ಅತ್ಯಂತ ಬೇಸರ ತರಿಸಿದೆ. ಪಕ್ಷದ ಒಳಗಿನ ಕಲಹವಾಗಿರಲಿ ಅಥವಾ ಬೆಂಬಲಿಗರ ನಡುವಿನ ಸಂಘರ್ಷವಾಗಿರಲಿ, ಇಂತಹ ಘಟನೆಗಳು ಸಹಜವಾಗಿರಬಹುದು. ಆದರೆ ಆ ಕಚ್ಚಾಟದಲ್ಲಿ ಒಬ್ಬ ವ್ಯಕ್ತಿಯ ಪ್ರಾಣವೇ ಹೋಗಿರುವುದು ನೋವಿನ ಸಂಗತಿ. ಶತ್ರುತ್ವ ಈ ಮಟ್ಟಕ್ಕೆ ಹೋಗಬಾರದು ಎಂದು ಕಳವಳ ವ್ಯಕ್ತಪಡಿಸಿದರು.

### ರಾಯಚೂರು ಜಿಲ್ಲೆ

ಇಂದಿನ ಹವಾಮಾನ ಮುನ್ಸೂಚನೆ



ಗರಿಷ್ಠ : 29 ಸೆಲ್ಸಿಯಸ್
ಕನಿಷ್ಠ : 18 ಸೆಲ್ಸಿಯಸ್

## ಅಲಬನೂರು: ಕೊಲೆ ಅಪರಾಧಿಗೆ 7 ವರ್ಷ ಶಿಕ್ಷೆ

ಜನವಾದಿ ವಾರ್ತೆ

ಸಿಂಧನೂರು ಜ 07 – ತಾಲ್ಲೂಕಿನ ಅಲಬನೂರು ಗ್ರಾಮದಲ್ಲಿ ನಡೆದ ಕೌಟುಂಬಿಕ ಕಲಹ ವಿಕೋಪಕ್ಕೆ ಹೋಗಿ ಕೊಲೆಯಲ್ಲಿ ಅಂತ್ಯಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಲೆ ಮಾಡಿದ ಅಪರಾಧಿಗೆ 7 ವರ್ಷ ಶಿಕ್ಷೆ ಹಾಗೂ ತಲಾ ರೂ.20 ಸಾವಿರ ದಂಡ ವಿಧಿಸಿ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಬಿ.ಬಿ.ಜಕಾತಿ ಮಂಗಳವಾರ ತೀರ್ಪು ನೀಡಿದ್ದಾರೆ.

2019ರಲ್ಲಿ ಅಲಬನೂರು ಗ್ರಾಮದ ಹುಲಿಗೆಮ್ಮ ಅವರ ಮಗಳು ಚಾಂದಿನಿ ಅವರನ್ನು ಮೌನೇಶ ಎಂಬುವವರೊಂದಿಗೆ ವಿವಾಹ ಮಾಡಿಕೊಡಲಾಗಿತ್ತು. ಮದುವೆಯಾದ 2 ತಿಂಗಳ ಕಾಲ ಚೆನ್ನಾಗಿ ನೋಡಿಕೊಂಡ ಮೌನೇಶ ನಂತರ ಪತ್ನಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿದ್ದನು. 2020ರಲ್ಲಿ ಚಾಂದಿನಿಗೆ ಹೊಡೆಯುತ್ತಿದ್ದಾಗ ಬಿಡಿಸಲು ಹೋದ ಪತ್ನಿಯ ತಮ್ಮ ಆನಂದನಿಗೆ ಮೌನೇಶ ಹಾಗೂ ಆತನ ಅಣ್ಣ ಆಂಜನೇಯ, ಮೌನೇಶನ ತಾಯಿ ಹುಲಿಗೆಮ್ಮ ಸೇರಿ ಎದೆಗೆ ಗುದ್ದಿ, ನೆಲಕ್ಕೆ ಕೆಡವಿ ಹಲ್ಲೆ ಮಾಡಿದ್ದರು. ಹಲ್ಲೆಗೊಳಗಾದ ಆನಂದನನ್ನು ಸಿಂಧನೂರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ಕರೆ ತಂದ ನಂತರ ಆಸ್ಪತ್ರೆಯಲ್ಲಿ ಮೃತಪಟ್ಟನು ಎಂದು ಆನಂದನ ತಾಯಿ ಹುಲಿಗೆಮ್ಮ ದೂರು ನೀಡಿದ್ದರು.

ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಿ.ಪಿ.ಐ.ಗಳಾದ ಬಾಲಚಂದ್ರ ಲಕ್ಕಂ ಹಾಗೂ ಚಂದ್ರಶೇಖರ ತನಿಖೆ ನಡೆಸಿ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿದ್ದರು.

ವಾದ–ವಿವಾದಗಳನ್ನು ಆಲಿಸಿದ ನ್ಯಾಯಾಧೀಶರು ಮೂವರು ಆರೋಪಿಗಳಿಗೆ 7 ವರ್ಷ ಸಾದಾ ಶಿಕ್ಷೆ, ತಲಾ ರೂ.20 ಸಾವಿರ ದಂಡ ಹಾಗೂ ದಂಡದ ಮೊತ್ತದಲ್ಲಿ ತಲಾ ರೂ.15 ಸಾವಿರಗಳನ್ನು ಮೃತನ ತಾಯಿ, ತಂದೆ ಮತ್ತು ಹೆಂಡತಿಗೆ ನೀಡಬೇಕು ಎಂದು ಆದೇಶ ಹೊರಡಿಸಿದ್ದಾರೆ.

## ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ

## ಬಹುತೇಕ ಅಧಿಕಾರಿಗಳು, ಸಿಬ್ಬಂದಿಯಲ್ಲಿ ಶಿಸ್ತು ಇಲ್ಲ: ಲೋಕಾಯುಕ್ತರ ಕಾರ್ಯದರ್ಶಿ ಅಸಮಾಧಾನ

ಜನವಾದಿ ವಾರ್ತೆ



ರಾಯಚೂರು ಜ 07 – ಜಿಲ್ಲೆಯ ಬಹುತೇಕ ಇಲಾಖೆಗಳಲ್ಲಿ ಕಡ್ಡಾಯವಾಗಿ ನಿರ್ವಹಣೆ ಆಗಲೇಬೇಕಾದ ನೌಕರರ ಹಾಜರಾತಿ ವಹಿ, ಚಲನವಹಿ, ನಗದು ವಹಿಗಳನ್ನು ಸರಿಯಾಗಿ ನಿರ್ವಹಿಸದೇ ಲೋಪ ಎಸಗುತ್ತಿರುವುದು ಲೋಕಾತಂಡದ ಕಾರ್ಯಾಚರಣೆ ವೇಳೆ ಕಂಡು ಬಂದಿದೆ ಎಂದು ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರ ಕಾರ್ಯದರ್ಶಿಗಳಾದ ಶ್ರೀನಾಥ ಕೆ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನವರಿ 7ರಂದು ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಂದ ನಡೆದ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಲೋಕಾ ತಂಡವು ಕಾರ್ಯಾಚರಣೆ ವೇಳೆ ಗಮನಿಸಿದಂತೆ ಬಹುತೇಕ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಗುರುತಿನ ಚೀಟಿ ಧರಿಸದೇ ಕೆಲಸ ನಿರ್ವಹಣೆ ಮಾಡುತ್ತಿದ್ದಾರೆ. ಗ್ರೂಪ್ ಡಿ ಸೇರಿದಂತೆ ಬೇರೆ ಬೇರೆ ಸಿಬ್ಬಂದಿಗೆ ನಿಗದಿಪಡಿಸಿದ ಡ್ರೆಸ್ ಕೋಡ್ ಪಾಲನೆಯಾಗಿಲ್ಲ. ಕಚೇರಿಗೆ ಹೋದಾಗ ಯಾರು ಏನು ಎಂದು ಏನೂ ತಿಳಿಯುವುದಿಲ್ಲ. ಬಹುತೇಕ ಕಚೇರಿಗಳಲ್ಲಿ ನೇಮ್ ಪ್ಲೇಟ್ ಕಾಣಿಸಲಿಲ್ಲ. ಇದು ಕೂಡಲೇ ಸರಿಯಾಗಬೇಕು. ಈ ಬಗ್ಗೆ ಜಿಲ್ಲಾಮಟ್ಟದ ಅಧಿಕಾರಿಗಳು ಕೂಡಲೇ ಕ್ರಮವಹಿಸಬೇಕು ಎಂದು ಅವರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಎಲ್ಲ ಕಚೇರಿಗಳಿಗೆ ಸುತ್ತೋಲೆ ರವಾನಿಸಿ ತಿಳಿಸಿದಾಗ್ಯೂ ಲೋಕಾಯುಕ್ತ ಅಧಿಕಾರಿಗಳ ಮಾಹಿತಿಯ ಫಲಕಗಳನ್ನು ಬಹುತೇಕ ಕಚೇರಿಗಳಲ್ಲಿ ಅಳವಡಿಸಿಲ್ಲ. ಸರ್ಕಾರಿ ನೌಕರರಿಗೆ ಅನ್ವಯಿಸುವ ಎಲ್ಲ ನಿಯಮಗಳು ಹೊರಗುತ್ತಿಗೆ ನೌಕರರಿಗು ಸಹ ಅನ್ವಯಿಸುತ್ತವೆ. ಆದಾಗ್ಯೂ ಹೊರಗುತ್ತಿಗೆ ನೌಕರರ ಹಾಜರಾತಿ ವಹಿಯನ್ನು ಬಹುತೇಕ ಕಚೇರಿಗಳಲ್ಲಿ ನಿರ್ವಹಣೆ ಮಾಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಅವರು, ತಪ್ಪಿತಸ್ಥ ಸರ್ಕಾರಿ ನೌಕರರ ಮೇಲೆ ಮೇಲೆ ಕ್ರಮವಹಿಸುವುದಷ್ಟೇ ನಮ್ಮ ಕೆಲಸವಲ್ಲ; ಸರ್ಕಾರದ ಆಡಳಿತ ವ್ಯವಸ್ಥೆಯನ್ನು ಸುಧಾರಿಸುವುದು ಸಹ ನಮ್ಮ ಕಾರ್ಯವಾಗಿದೆ. ಈ ದಿಶೆಯಲ್ಲಿ ತಂಡವು ಭೇಟಿ ನೀಡಿದ ವೇಳೆ ತಿಳಿಸಿದ ಅಂಶಗಳ ಬಗ್ಗೆ ಅರಿತು ಅಧಿಕಾರಿಗಳು ಮತ್ತು ಸಿಬ್ಬಂದಿ ಮಾರ್ಗಸೂಚಿ ಅಂಶಗಳನ್ನು ಪಾಲನೆ ಮಾಡಬೇಕು ಎಂದು ತಿಳಿಸಿದರು.

☛4

## ಜೆಸ್ಕಾಂ ನಗರ: ಇಂದು ವಿದ್ಯುತ್ ವ್ಯತ್ಯಯ

ರಾಯಚೂರು ಜ 07 – ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ–01ರ ವ್ಯಾಪ್ತಿಯ ಮಲಿಯಾಬಾದ್110 ಕೆ.ವಿ ವಿದ್ಯುತ್ ಉಪ ಕೇಂದ್ರದಲ್ಲಿ ಬರುವರಿ ಕಂಡಕ್ಟರಿಂಗ್ ದುರಸ್ತಿ ಕಾಮಗಾರಿ ನಿರ್ವಹಿಸುತ್ತಿರುವದರಿಂ ಜನವರಿ 8ರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ01 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕಾರಿಸುವಂತೆ ಕೋರಲಾಗಿದೆ.

ಅಂದು ಬೆಳಿಗ್ಗೆ 10ಗಂಟೆಯಿಂದ ಮಾನಸನಗರ, ಮಂತ್ರಾಲಯಂ ರೋಡ್, ಯಂಕಣ್ಣ ಸ್ವಿಮ್ಮಿಂಗ್ ಪೂಲ್, ಬೃಂದಾನವ ಕಲ್ಯಾಣ ಮಂಟಪ, ರೇಸ್ ಸ್ಕೂಲ್ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532–226386, 08532–231999, 9480845955 ಅಥವಾ 9448395621ಗೆ ಸಂಪರ್ಕಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ–01ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಯಚೂರಲ್ಲಿ ಲೋಕಾಯುಕ್ತರಿಂದ ಪತ್ರಿಕಾಗೋಷ್ಠಿ

## ಲೋಕಾಯುಕ್ತದಲ್ಲಿ ದೂರುಗಳ ಪ್ರಮಾಣ ಹೆಚ್ಚುತ್ತಿರುವುದು ದುರದೃಷ್ಟಕರ: ಲೋಕಾಯುಕ್ತರ ಕಾರ್ಯದರ್ಶಿ ಶ್ರೀನಾಥ ಕೆ ಕಳವಳ

ಜನವಾದಿ ವಾರ್ತೆ



ರಾಯಚೂರು ಜ 07 – ಕರ್ನಾಟಕ ಲೋಕಾಯುಕ್ತದಲ್ಲಿ 2022ರಲ್ಲಿ ಇದ್ದ 8000 ಕೇಸಗಳ ಪ್ರಮಾಣವು ಈಗ 2025ರ ಹೊತ್ತಿಗೆ 45,000ಕ್ಕೆ ಏರಿದ್ದು ದುರದೃಷ್ಟಕರ ಎಂದು ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರ ಕಾರ್ಯದರ್ಶಿಗಳಾದ ಶ್ರೀನಾಥ ಕೆ ಅವರು ಕಳವಳ ವ್ಯಕ್ತಪಡಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನವರಿ 7ರಂದು ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಂದ ನಡೆದ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಎ.ವಿ.ಪಾಟೀಲ ಅವರೊಂದಿಗೆ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು.

ಸರ್ಕಾರದ ಕೆಲಸ ದೇವರ ಕೆಲಸ ಎಂದು ಅರ್ಥೈಸಲಾಗಿದೆ. ಸರ್ಕಾರಿ ನೌಕರಿ ಪಡೆಯುವ ಅಧಿಕಾರಿಗಳು ಮತ್ತು ಸಿಬ್ಬಂದಿ ಅದೃಷ್ಟವಂತರು. ಅವರ ಬಗ್ಗೆ ಸಮಾಜದಲ್ಲಿ ವಿಶೇಷ ಗೌರವ ಇರುತ್ತದೆ. ಆದರೆ, ಇದನ್ನು ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿ ಅರಿಯದೇ ಹಣದ ಆಸೆಗಾಗಿ ಲೋಪ ಎಸಗುತ್ತಿರುವುದು ಕಂಡು ಬರುತ್ತಿದೆ. ಅಧಿಕಾರಿಗಳು ಮತ್ತು ಸಿಬ್ಬಂದಿ ಲೋಪವೆಸಗಿ ವಾರಂಟ್ ಸ್ವೀಕರಿಸುವ ಹಂತಕ್ಕೆ ತಲುಪಿದ್ದು ನೋವಿನ ಸಂಗತಿ ಎಂದು ಅವರು ತಿಳಿಸಿದರು.

☛4

## ಲೋಕಾಯುಕ್ತ ಅಧಿಕಾರಿಗಳ ದಿಢೀರ್ ಭೇಟಿ; ಪರಿಶೀಲನೆ



ಜನವಾದಿ ವಾರ್ತೆ

ಸಿರವಾರ ಜ 07– ಪಟ್ಟಣದ ಪಟ್ಟಣ ಪಂಚಾಯತಿ ಕಾರ್ಯಾಲಯಕ್ಕೆ ಬುಧವಾರ ಸಂಜೆ ಲೋಕಾಯುಕ್ತ ಅಧಿಕಾರಿಗಳು ಭೇಟಿ ನೀಡಿ ಕಡತಗಳ ಪರಿಶೀಲನೆ ನಡೆಸಿದರು.

ಬೆಳಗಾವಿ ಲೋಕಾಯುಕ್ತ ಡಿವೈಎಸ್ಪಿ ಭರತ ರೆಡ್ಡಿ ನೇತೃತ್ವದ ತಂಡ ಬೇಟಿ ನೀಡಿ ಪಟ್ಟಣ ಪಂಚಾಯತಿಯ ಸಿಬ್ಬಂದಿಗಳು ಜೊತೆ ಮಾತನಾಡಿ ಕಡತಗಳ ಶೋಧ ನಡೆಸಿ ಹಲವು ವಿಷಯಗಳ ಕುರಿತು ಪರಿಶೀಲನೆ ನಡೆಸಿ ಎಲ್ಲರ ಕಾರ್ಯ ವೈಖರಿಯ ಬಗ್ಗೆ ಮಾಹಿತಿ ಪಡೆದರು.

ಕೆಲಸದ ಸಮಯದಲ್ಲಿ ತೊಂದರೆ ಉಂಟಾದಲ್ಲಿ ಮೇಲಾಧಿಕಾರಿಗಳ ಗಮನಕ್ಕೆ ತರಬೇಕು. ಯಾವುದೇ ಕೆಲಸಗಳಿದ್ದರೂ ಸಾರ್ವಜನಿಕರ–ರಿಂದ ಲಂಚ ಪಡೆಯಬಾರದು. ಸುಖಾಸುಮ್ಮನೆ ಸಾರ್ವಜನಿಕರನ್ನು ಅಲೆದಾಡಿಸಬಾರದು, ನಮ್ಮ ಕರ್ತವ್ಯವನ್ನು ಪ್ರಾಮಾಣಿಕತೆಯಿಂದ ಮಾಡಬೇಕು ಎಂದರು.

ಬೆಳಗಾವಿ ಲೋಕಾಯುಕ್ತ ಡಿವೈಎಸ್ಪಿ ಭರತ್ ರೆಡ್ಡಿ, ಇನ್ಸ್ಪೆಕ್ಟರ್ ರಾಜಶೇಖರಯ್ಯ ಬೆಂಗಳೂರು, ಪ್ರಕಾಶ, ನಾಗಣ್ಣ ಪೂಜಾರಿ ಶಂಕರ, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಸುರೇಶ ಶೆಟ್ಟಿ ಸೇರಿದಂತೆ ಸಿಬ್ಬಂದಿ ಇದ್ದರು.

## ವೆನೆಜುವೆಲಾ ಮೇಲೆ ಅಮೆರಿಕಾ ದಾಳಿ ವಿರೋಧಿಸಿ

## ಎಡ ಪಕ್ಷಗಳ – ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ

ಜನವಾದಿ ವಾರ್ತೆ




ಸಿಂಧನೂರು ಜ 07 – ತೈಲ ಸಂಪದ್ಭರಿತ ರಾಷ್ಟ್ರ ವೆನೆಜುವೆಲಾದ ಮೇಲೆ ಅಮೆರಿಕಾದ ಮಿಲಿಟರಿ ದಾಳಿ ಹಾಗೂ ಅಧ್ಯಕ್ಷ ನಿಕೊಲಸ್ ಮಡೊರಾ ಮತ್ತು ಅಧ್ಯಕ್ಷರ ಪತ್ನಿ ಸಿಲಿಯಾ ಫ್ಲೋರ್ಸ್ ಬಂಧನ ಖಂಡಿಸಿ, ಎಡ ಪಕ್ಷಗಳು ಹಾಗೂ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ನಗರದ ಗಾಂಧಿವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ವೆನೆಜುವೆಲಾದ ಕ್ಯಾರಕಾಸ್ ಮತ್ತು ಇತರ ಪ್ರದೇಶಗಳಲ್ಲಿ ನಾಗ–ರಿಕ ಮತ್ತು ಮಿಲಿಟರಿ ಸ್ಥಳಗಳನ್ನು ಗುರಿಯಾಗಿಸಿಕೊಂಡು ಅಮೆರಿಕಾ ದುರಾಕ್ರಮಣ ಮಾಡಿರುವುದು. ವಿಶ್ವಸಂಸ್ಥೆಯ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಆರ್ಥಿಕ ಬಿಕ್ಕಟ್ಟಿನಿಂದ ಕಂಗೆಟ್ಟಿರುವ ಸಾಮ್ರಾಜ್ಯಶಾಹಿ ಅಮೆರಿಕಾ ವೆನೆಜುವೆಲಾದ ದಾಳಿ ನಡೆಸುವ ಮೂಲಕ ಇತರೆ ದೇಶಗಳ ಶಾಂತಿ, ಸ್ಥಿರತೆ, ಸೌರ್ವಭೌಮತ್ವ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಗಂಭೀರ ಬೆದರಿಕೆಯೊಡ್ಡಿದೆ. ಮಡೊರಾ ಮತ್ತು ಅವರ ಪತ್ನಿಯನ್ನು ಅಪಹರಿಸಿ ಬಂಧಿಸಿರುವ ಕೃತ್ಯವು ಅಮೆ–ರಿಕದ ಭಯೋತ್ಪಾದಕ ದಾಳಿಯಾಗಿದೆ ಎಂದು ಪ್ರತಿಭಟನಾ ನಿರತರು ಆಕ್ರೋಶ ವ್ಯಕ್ತಪಡಿಸಿದರು.

ಇರಾನ್, ಇರಾಕ್ ಮೇಲೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುಳ್ಳು ಆರೋಪಿಸಿ ದಾಳಿ ನಡೆಸಿದ್ದಲ್ಲದೇ, ಇಸ್ರೇಲ್‌ನ್ನು ಎತ್ತಿಗಟ್ಟಿ ಪ್ಯಾಲೆಸ್ತೇನ್, ಗಾಜಾದ ಮೇಲೆ,

☛4

## ಮಾನ್ವಿ : ಕ್ಷೇತ್ರ ಶಿಕ್ಷಣ ಇಲಾಖೆ ಕಚೇರಿಯ ಮೇಲೆ ಕರ್ನಾಟಕ ಲೋಕಾಯುಕ್ತ ಇಲಾಖೆಯ ಅಧಿಕಾರಿಗಳ ದಾಳಿ, ದಾಖಲೆಗಳ ಪರಿಶೀಲನೆ

ಜನವಾದಿ ವಾರ್ತೆ



ಮಾನ್ವಿ ಜ 7– ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಕರ್ನಾಟಕ ಲೋಕಯುಕ್ತ ಇಲಾಖೆಯ ಬೆಂಗಳೂರು ಲೋಕಯುಕ್ತ ನಿರೀಕ್ಷಕರಾದ ಆನಂದ ನೇತೃತ್ವದಲ್ಲಿ ದಾಳಿ ನಡೆಸಿ ಶಿಕ್ಷಣ ಇಲಾಖೆಯ ವಿವಿಧ ದಾಖಲೆಗಳನ್ನು ಪರಿಶೀಲಿಸಿ ನಂತರ ಮಾತನಾಡಿ ಬೆಂಗಳೂರು ರಾಜ್ಯ ಲೋಕಯುಕ್ತರಾದ ಬಿ.ಎಸ್.ಪಾಟೀಲ್ ರವರು ತಾ.ಕ್ಷೇತ್ರ ಶಿಕ್ಷಣ ಇಲಾಖೆ ಬಂದ ದೂರನ್ನು ದಾಖಲಿಸಿಕೊಂಡು ಹೆಚ್ಚಿನ ದಾಖಲಾತಿಗಳಿಗಳನ್ನು ಸಂಗ್ರಹಿಸುವುದಕ್ಕಾಗಿ ವಾರೆಂಟ್ ನೀಡಿರುವ ಹಿನ್ನೆಲೆಯಲ್ಲಿ ಪಟ್ಟಣದ ತಾ.ಕ್ಷೇತ್ರ ಶಿಕ್ಷಣ ಇಲಾಖೆ ಕಚೇರಿಯನ್ನು ತಾ.ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಸೇಖರ .ಡಿ.ಗೈರಿನಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳಿಂದ ದಾಖಲೆಗಳನ್ನು ಪಡೆದು ಪರಿಶೀಲಿಸಲಾಗುತ್ತಿದೆ ಹಾಗೂ ಅಗತ್ಯದಾಖಲೆಗಳನ್ನು ಸಂಗ್ರಹಿಸಿ ರಾಜ್ಯ ಲೋಕಯುಕ್ತರಿಗೆ ವರದಿ ಸಲ್ಲಿಸಲಾಗುವುದು. ಶಿಕ್ಷಣ ಇಲಾಖೆಯ 20 ಅಂಶಗಳ ಕಾರ್ಯಕ್ರಮಗಳ ಸಂಪೂರ್ಣವಾದ ಮಾಹಿತಿಯನ್ನು ಪಡೆಯಲಾಗುತ್ತಿದೆ. ತಾಲೂಕಿನ ಸರ್ಕಾರಿ ಶಾಲೆಗಳ ಮಾಹಿತಿ ಅವುಗಳಲ್ಲಿ ಸಂಪೂರ್ಣವಾಗಿ ಶಿಥಿಲಗೊಂಡಿರುವ ಕೋಠಡಿಗಳ ಸಂಖ್ಯೆ ಹಾಗೂ ಶಿಥಿಲಗೊಂಡಿರುವ ಕೊಠಡಿಗಳಲ್ಲಿ ಮಕ್ಕಳು ಅಭ್ಯಾಸ ಮಾಡುತ್ತಿದ್ದಲ್ಲಿ ಮಕ್ಕಳ ಸುರಕ್ಷತೆಗೆ ಕೈಗೊಂಡಿರುವ ಸುರಕ್ಷತಾ ಕ್ರಮಗಳ ಬಗ್ಗೆ ಮಾಹಿತಿ,ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕಲ್ಪಿಸಲಾಗಿರುವ ಮೂಲಸೌಕರ್ಯಗಳ ಬಗ್ಗೆ ಮಾಹಿತಿ, ಶೌಚಾಲಯ,ಕುಡಿಯುವ ನೀರು, ಕಾಯಂ ಶಿಕ್ಷಕರ ಸಂಖ್ಯೆ,ಶಿಕ್ಷಕರ ಕೊರತೆ, ಸಿಬ್ಬಂದಿಗಳ ಹಾಜರಾತಿ, ಮಕ್ಕಳ ಕಲಿಕೆಗೆ

☛4

# ಸ್ಥಳೀಯವರಿಗೆ ಅಂಗನವಾಡಿ ಕಾರ್ಯಕರ್ತೆ ಹುದ್ದೆ ನೀಡದೇ ಪರಸ್ಥಳವರಿಗೆ ಆದತ್ಯೆ: ಅಧಿಕಾರಿಗಳ ಎಡವಟ್ಟುನಿಂದ ಗ್ರಾಮದವರಿಗೆ ಅನ್ಯಾಯ: ಗ್ರಾಪಂ ಸದಸ್ಯ ಅಮರೇಶ ಕುಪಗಲ್ ಆರೋಪ

ಜನವಾದಿ ವಾರ್ತೆ

ದೇವದುರ್ಗ ಜ 7– ಕೆ.ಇರಬಗೇರಾ ಗ್ರಾಪಂ ವ್ಯಾಪ್ತಿಯ ಕ್ವಾರೇರದೊಡ್ಡಿ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ನೇಮಕಾತಿಯಲ್ಲಿ ಸ್ಥಳೀಯವರಿಗೆ ಆದತ್ಯೆ ನೀಡದೇ ಪರಸ್ಥಳದವರಿಗೆ ಹುದ್ದೆ ನೀಡಿದ್ದು, ಅಧಿಕಾರಿಗಳ ಎಡವಟ್ಟದಿಂದ ಸ್ಥಳೀಯ ನಿವಾಸಿಗಳಿಗೆ ಅನ್ಯಾಯ ಮಾಡಲಾಗಿದೆ ಎಂದು ಕೆ.ಇರಬಗೇರಾ ಗ್ರಾಪಂ ಸದಸ್ಯ ಅಮರೇಶ ಕುಪಗಲ್ ಆರೋಪಿಸಿದರು.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಕೆ.ಇರಬಗೇರಾ ಗ್ರಾಮದ ವಾರ್ಡ್ ನಂ.12ರಲ್ಲಿ 2ನೇ ಅಂಗನವಾಡಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತೆ ಸ್ಥಳೀಯರಲ್ಲದವರನ್ನು ನೇಮಕ ಮಾಡಿದ್ದು, ಸುಳ್ಳು ದಾಖಲೆಗಳು ಸೃಷ್ಟಿಸಿ ಕಾರ್ಯಕರ್ತೆಯನ್ನು ಆಯ್ಕೆ ಮಾಡಿರುವುದು ಅಧಿಕಾರಿಗಳ ಲೋಪ್ ಎದ್ದು, ಕಾಣುತ್ತಿದೆ ಎಂದು ದೂರಿದರು. ಯಾವುದೇ ಅಂಗನವಾಡಿ ಕೇಂದ್ರಕ್ಕೆ ಕಾರ್ಯಕರ್ತೆ ನೇಮಕಾತಿ ಮಾಡುವಾಗ ಸ್ಥಳೀಯರಿಗೆ ಪ್ರಥಮ ಆದತ್ಯೆ ನೀಡಲಾಗುತ್ತಿದೆ. ಹುದ್ದೆ ಆಸೆ ಬಹಿಸಿರುವ ಕಾರ್ಯಕರ್ತೆ ಇಲ್ಲಸಲ್ಲದ ಸುಳ್ಳು ದಾಖಲೆಗಳು ಸೃಷ್ಟಿಸಿ ನೇಮಕವಾಗಿದ್ದಾರೆ. ಆಧಾರ್ ಕಾರ್ಡ್ ನಂಬರ್ ಒಂದೇ ಆದರೆ ಸೋಮನಮರಡಿ ದೊಡ್ಡಿ, ಕ್ವಾರರೇದೊಡ್ಡಿ ಎಂದು ಎರಡು ಆಧಾರ್ ಕಾರ್ಡ್ನಲ್ಲಿ ಹೆಸರು ನೋಂದಣಿಯಾಗಿದೆ. ಕಂದಾಯ ವಿಎಗಳು ಸ್ಥಳೀಯವರು ಎಂದು ವಾಸಸ್ಥಳ ನೀಡಿದ್ದು, ದೂರು ನೀಡಿದ ಹಿನ್ನೆಲೆ ಮರು ಪರಿಶೀಲನೆ ಮಾಡಿದ ನಂತರ ಸ್ಥಳೀಯವರಲ್ಲ ಎಂದು ದಾಖಲೆ ನೀಡಲಾಗಿದೆ. ಅನ್ನಪೂರ್ಣ ಬಸವರಾಜ, ತಿಮ್ಮವ್ವ ನಾಗಪ್ಪ, ಹನುಮಂತಿ ಅಮರೇಶ ಸೇರಿ ಹುದ್ದೆಗೆ ಅರ್ಜಿ ಸಲ್ಲಿಸಿದ್ದರೂ, ನೇಮಕಾತಿ ಮಾಡಿದ ಹನುಮಂತಿ ಅಮರೇಶ ಸ್ಥಳೀಯುವರಲ್ಲ. ಹೀಗಾಗಿ ನೇಮಕಗೊಂಡಿರುವ ಕಾರ್ಯಕರ್ತೆಯನ್ನು ಕೂಡಲೇ ರದ್ದು ಮಾಡಿ ಸ್ಥಳೀಯುವರಿಗೆ ಮೊದಲು ಆದತ್ಯೆ ನೀಡಬೇಕು ಎಂದು ಒತ್ತಾಯಿಸಿದರು. ಈಗಾಗಲೇ ಅಧಿಕಾರಿಗಳಿಗೆ ದೂರು ನೀಡಲಾಗಿದ್ದು, ಪರಿಶೀಲನೆ ಮಾಡುವ ಭರವಸೆ ನೀಡಿದ್ದು, ಯಾವುದೇ ಕಾರಣಕ್ಕೆ ಪರಸ್ಥಳದವರಿಗೆ ಹುದ್ದೆ ನೀಡದೇ ಸ್ಥಳೀಯವರಿಗೆ ನೀಡಬೇಕು ಎಂದು ಆಗ್ರಹಿಸಿದರು. ಸುಳ್ಳು ದಾಖಲೆಗಳು ನೀಡಿದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು. ಕಾರ್ಯಕರ್ತೆ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿ ಅಧಿಕಾರಿಗಳು ಅರ್ಹ ಕಾರ್ಯಕರ್ತೆರಿಗೆ ಒಂದು ತಿಂಗಳ ಒಳಗಾಗಿ ನೇಮಕಾತಿ ಆದೇಶ ನೀಡಬೇಕು. ಕ್ವಾರರೇದೊಡ್ಡಿ ಅಂಗನವಾಡಿ ಕೇಂದ್ರ ಕಾರ್ಯಕರ್ತೆ ಹುದ್ದೆ ಇವತ್ತಿಗೂ ಒಂದು ವರ್ಷ ನಂತರ ನೇಮಕಾತಿ ಆದೇಶವನ್ನು ನೀಡಿದ್ದು, ಅಧಿಕಾರಿಗಳ ನಡೆ ಅನುಮಾನಕ್ಕೆ ಕಾರಣವಾಗಿ ಎಂದು ದೂರಿದರು. ಜಿಲ್ಲಾ ಮತ್ತು ತಾಲೂಕ ಮಟ್ಟದ ಅಧಿಕಾರಿಗಳು ಗ್ರಾಮಕ್ಕೆ ಹೋಗಿ ಸೂಕ್ತ ಪರಿಶೀಲನೆ ಮಾಡಿದ ನಂತರ ಸ್ಥಳೀಯವರಿಗೆ ನೇಮಕಾತಿ ಮಾಡಬೇಕು. ಒಂದು ವೇಳೆ ಅಲಕ್ಷ ಮನೋಭಾವನೆ ತಾಳಿದ ಪರಿಣಾಮ ಕಚೇರಿಗೆ ಮುಂದೆ ಹೋರಾಟ ಅನಿವಾರ್ಯ ಎಂದು ಎಚ್ಚರಿಕೆ ನೀಡಿದರು. ಅಮರೇಶ ಮಜ್ಜಿ ಇದ್ದರು.

# ಒನ್ ಟೈಮ್ ಲಕ್ಕಿ ಡ್ರಾನಲ್ಲಿ ಎಗ್ ರೈಸ್ ಮಾಡುವ ಯುವಕನಿಗೆ ಬೈಕ್ ಡ್ರಾ

ಜನವಾದಿ ವಾರ್ತೆ

ದೇವದುರ್ಗ ಜ 7– ತಾಲ್ಲೂಕಿನ ಕೊತ್ತದೊಡ್ಡಿಗ್ರಾಮದ ಶ್ರೀ ಹಿರೇಗುಡ್ಡದಯ್ಯ ದೇವಸ್ಥಾನ ಸಮಿತಿ ಹಾಗೂ ಶ್ರೀ ಆಂಜನೇಯ ದೇವಸ್ಥಾನ ಜಾತ್ರೆಯ ಪ್ರಯುಕ್ತವಾಗಿ ಕೊತ್ತದೊಡ್ಡಿ ಗ್ರಾಮದಲ್ಲಿ ನಡೆದ ಸುನೀತಾ ಬ್ಯುಟಿ ಫಾರ್ಲರ್ ದೇವದುರ್ಗ ಇವರ ನೇತೃತ್ವದಲ್ಲಿ ಒನ್ ಟೈಮ್ ಲಕ್ಕಿ ಡ್ರಾ ನಲ್ಲಿ ಸರಿ ಸುಮಾರು ನೂರಾರು ಅಭ್ಯರ್ಥಿಗಳು ಭಾಗಿಯಾಗಿದ್ದರು, ಇದರಲ್ಲಿ ವಿಶೇಷವಾಗಿ ಐದು ಜನ ವಿಜೇತರಿಗೆ ಮಾತ್ರ ಅವಕಾಶ ಕಲ್ಪಿಸಿಲಾಗಿತ್ತು.

ಈ ಒನ್ ಟೈವ್ ಲಕ್ಕಿ ಡ್ರಾನಲ್ಲಿ ವಿಜೇತರಿಗೆ ಹೆಚ್ ಎಫ್ ಡಿಲೆಕ್ಸ್ ದ್ವಿಚಕ್ರವಾಹನ ಮೊದಲ ಬಹುಮಾನ, ಎರಡನೆಯದು ಫ್ರಿಡ್ಜ್, ಮೂರನೇ ಬಹುಮಾನ ಟಿವಿ, ನಾಲ್ಕನೇ ಬಹುಮಾನ ಸ್ಮಾರ್ಟ್ ಫೋನ್, ಐದನೇ ಬಹುಮಾನ ಮಿಕ್ಸಿ, ಏರ್ಪಡಿಸಿದರು.

ಸುನೀತಾ ಬ್ಯುಟಿ ಫಾರ್ಲರ್ ದೇವದುರ್ಗ ಇವರು ಒಂದೇ ದಿನ ಚೀಟಿ ಒಂದೇ ದಿನ ಡ್ರಾ ಎಂಬ ವೈಶಿಷ್ಟ್ಯತೆಯಿಂದ ಈ ಲಕ್ಕಿ ಡ್ರಾ ಗ್ರಾಮಸ್ಥರು ಮುಂದೇನೆ ಏರ್ಪಡಿಸಲಾಗಿತ್ತು,ಈ ಒಂದೇ ಚೀಟಿ ಒಂದೇ ದಿನ ಡ್ರಾದಲ್ಲಿ ನೂರಾರು ಸದಸ್ಯರು ಪಾಲ್ಗೊಂಡಿದರು, ಈ ಒನ್ ಟೈಮ್ ಲಕ್ಕಿ ಡ್ರಾದಲ್ಲಿ ಒಬ್ಬ ಸದಸ್ಯರ ಮೊತ್ತ ಕೇವಲ 200 ರೂಪಾಯಿ ಇದಾಗಿತ್ತು.



ಮೊದಲ ಬಹುಮಾನ ಎಚ್ ಎಫ್ ಡಿಲೆಕ್ಸ್, ಎರಡನೇ ಬಹುಮಾನ ಫ್ರಿಡ್ಜ್, ಮೂರನೇ ಬಹುಮಾನ ಟಿವಿ, ನಾಲ್ಕನೇ ಬಹುಮಾನ ಸ್ಮಾರ್ಟ್ ಫೋನ್, ಐದನೇ ಬಹುಮಾನ ಮಿಕ್ಸಿ, ಏರ್ಪಡಿಸಲಾಗಿತ್ತು.

ಒನ್ ಟೈಮ್ ಲಕ್ಕಿ ಡ್ರಾ ಶ್ರೀ ಹಿರೇಗುಡ್ಡದಯ್ಯ ದೇವಸ್ಥಾನದ ಮುಂಭಾಗದಲ್ಲಿ ಎಲ್ಲರ ಸಮ್ಮುಖದಲ್ಲಿ ಚೀಟಿ ವಿತರಣೆ ಏರ್ಪಡಿಸಲಾಗಿ–ತ್ತು, ಈ ಒನ್ ಟೈಮ್ ಡ್ರಾನಲ್ಲಿ ದೇವದುರ್ಗ ತಾಲ್ಲೂಕಿನ ನಾನಾ ಗ್ರಾಮದ ಯುವಕರಿಗೆ ಅದೃಷ್ಟವಂತ ಅಭ್ಯರ್ಥಿಗಳು ಈ ಕೆಳಗಿನಂತೆ ಇವೆ.

**ಮೊದಲ ಬೈಕ್ ವಿಜೇತ ಸುಭಾನ್ ಕೊತ್ತದೊಡ್ಡಿ.**

**ಎರಡನೇ ಫ್ರೀಡ್ಜ್ ವಿಜೇತ ನಬಿ ವಕೀಲರು ಮಸ್ಕಿ**

**ಮೂರನೇ ಟಿವಿ ವಿಜೇತ ನಿಂಗಣ್ಣ ದೊರೆ**

**ನಾಲ್ಕನೇ ಸ್ಮಾರ್ಟ್ ಫೋನ್ ವಿಜೇತ ಭೀಮಣ್ಣಗೌಡ ಕೊತ್ತದೊಡ್ಡಿ**

**ಐದನೇ ಸಾಬಯ್ಯ ಮಿಕ್ಸಿ ವಿಜೇತ.**

ಬೈಕ್ ವಿಜೇತ ಪಡೆದ ಹೆಗ್ಗ್ ರೈಸ್ ಮಾಡುವ ಕೊತ್ತದೊಡ್ಡಿ ಬಡ ಯುವಕನಿಗೆ ಒಲಿದ 90000 ಸಾವಿರ ಬೆಲೆ ಬಾಳುವ ಬೈಕ್ ನೋಡಿ ನನಗೆ 200 ರೂಪಾಯಿನಲ್ಲಿ ಸಿಕ್ಕಿದೆ 200 ರೂಪಾಯಿ ಎಲ್ಲೋ ಖರ್ಚ್ ಮಾಡುವೆ ಎಂದು ತಿಳಿದು ಕೊಡೋದು ಬೇಡವಾ ಅಂತ ಸುಮಾರು ಸಲ ಯೋಚನೆ ಮಾಡಿ ಈ ಚೀಟಿ ಕಟ್ಟಿದೀನಿ ಆದ್ರೆ ದೇವರು ಆಶೀರ್ವಾದ ಈ ಬಡ ಹುಡುಗ ಹೆಗ್ಗ್ ರೈಸ್ ಮಾಡುವ ಅಂಗಡಿ ಮೇಲೆ ಬಿದ್ದಿದೆ ಅಂತ ಕಾಣುತ್ತೆ ಅದಕ್ಕೆ ದೇವರು ಈ ಬಡವನ ಮೇಲೆ ಕಣ್ಣು ಬಿಟ್ಟಿದ್ದಾನೆ ಎಲ್ಲಾ ಅ ಹಿರೇಗುಡ್ಡದಯ್ಯನ ಆಶೀರ್ವಾದ ಎಂದು ಬೈಕ್ ವಿಜೇತೆ ಹರ್ಷ ವ್ಯಕ್ತಪಡಿಸಿದ.

ಈ ಸಂದರ್ಭದಲ್ಲಿ ಕೆಂಚಣ್ಣ ಪುಜಾರಿ, ಯಂಕನಗೌಡ, ಹನುಮಯ್ಯಗೌಡ ಮರಡಿ, ಭೀಮಣ್ಣಗೌಡ, ಹನುಮಂತ್ರಾಯಗೌಡ ವಕೀಲರು, ಶೇಖರಪ್ಪ ಗೌಡ, ಮತ್ತಿತ್ತರು ಭಾಗಿಯಾಗಿದ್ದರು.

# ಮಹತ್ಕಾರ್ಯಗಳನ್ನು ಆಶ್ರಮದಲ್ಲಿ ಆಚರಿಸಿ ಮಾದರಿಯಾಗಬೇಕು – ಸದಾನಂದ ಸ್ವಾಮೀಜಿ

ಜನವಾದಿ ವಾರ್ತೆ

ಸಿಂಧನೂರು ಜ 7– ನಗರದ ಪಿಡಬ್ಲ್ಯೂಡಿ ಕ್ಯಾಂಪಿನ ಪುನೀತ್ ಪುಣ್ಯಾಶ್ರಮದಲ್ಲಿ ಡಾ.ನಾಗವೇಣಿ ಎಸ್ ಪಾಟೀಲ್ ಅಭಿಮಾನಿ ಬಳಗದಿಂದ ಮುಖ್ಯಮಂತ್ರಿಗಳ ಅಭಿನಂದನಾ ಕಾರ್ಯಕ್ರಮ ನಡೆಯಿತು. ಕಲ್ಯಾಣ ಕರ್ನಾಟಕದ ರಾಯಚೂರು ಜಿಲ್ಲೆ ಸಿಂಧನೂರು ನಗರದಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಅತೀ ಹೆಚ್ಚು ದಿನಗಳ ಕಾಲ ಮುಖ್ಯಮಂತ್ರಿಗಾಗಿ ದಾಖಲೆ ಬರೆದಿದ್ದ ದೇವರಾಜ್ ಅರಸು ಅವರ ದಾಖಲೆ ಸರಿಗಟ್ಟಿದ ಸವಿನೆನಪಿಗಾಗಿ ಅಭಿನಂದನಾ ಕಾರ್ಯಕ್ರಮವನ್ನು ಪುನೀತ್ ಪುಣ್ಯಶ್ರಮದ ದೇವರ ಮಕ್ಕಳ ಜೊತೆಗೆ ಆಚರಿಸಲಾಯಿತು.



ಈ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟನೆ ಮಾಡಿ ಮುಖ್ಯ ಅತಿಥಿಗಳಾದ ಬಂಗಾರಿ ಕ್ಯಾಂಪ್ಪಿನ ಸದ್ಗುರು ಸದಾನಂದ ಸ್ವಾಮೀಜಿ ಆಶೀರ್ವಚನ ನೀಡಿ ಜನನಾಯಕರು ಹಾಗೂ ಕಲಾವಿದರು ಹುಟ್ಟುಹಬ್ಬ ಸಭೆ ಸಮಾರಂಭಗಳನ್ನು ಅದ್ದೂರಿ ವೇದಿಕೆ ಮಾಡಿ ದುಂದು ವೆಚ್ಚ ಮಾಡುವ ಬದಲು ಅನಾಥಶ್ರಮ ವೃದ್ಧಾಶ್ರಮ ಮುಂತಾದ ಸೇವಾಶ್ರಮಗಳಲ್ಲಿ ಸರಳವಾಗಿ ಮಾಡಿ ಅನ್ನದಾನ ವಸ್ತ್ರದಾನ ಆರ್ಥಿಕ ಸಹಾಯ ಮಾಡುವ ಮೂಲಕ ಮಾನವೀಯತೆ ಮೆರೆಯಬೇಕು ಎಂದು ಸಂದೇಶ ಸಾರಿದರು.

ನಂತರ ಮೂರು ಮೈಲಿ ಕ್ಯಾಂಪಿನ ಸೋಮನಾಥ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ ಪ್ರತಿಷ್ಠೆಗೆ ಬಿದ್ದು ಅದ್ದೂರಿ ಕಾರ್ಯಕ್ರಮ ಮಾಡುವ ಈಗಿನ ಕಾಲದಲ್ಲಿ ಪರೋಪಕಾರಿ ಸೇವಾಕಾರ್ಯ ಮಾಡುವ ನೆಲೆಗಳಲ್ಲಿ ಇಂತಹ ಸಂಭ್ರಮ ಆಚರಣೆ ಮಾಡುವ ಮೂಲಕ ನಾಗವೇಣಿ ಪಾಟೀಲರು ಇತರ ನಾಯಕರಿಗೆ ಮಾದರಿ ಆಗಿದ್ದಾರೆ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಡಾ.ನಾಗವೇಣಿ ಎಸ್ ಪಾಟೀಲ್, ಸೇವಾಸಿರಿ ಚಾರಿಟೇಬಲ್ ಟ್ರಸ್ಟಿನ ಅಧ್ಯಕ್ಷರಾದ ಪ್ರದೀಪ್ ಪೂಜಾರಿ, ರೇಖಾ ಪಂಪಯ್ಯ ಸ್ವಾಮಿ ಹಿರೇಮಠ, ಅನುಷಾ, ಪವನ್ ಕುಮಾರ್ ಹಾಗೂ ಆಶ್ರಮದ ಸಿಬ್ಬಂದಿಗಳು ಭಾಗವಹಿಸಿದ್ದರು.

# ಉದ್ದೇಶ ಪೂರ್ವಕವಾಗಿಯೇ ರಾಜಶೇಖರ್ ರೆಡ್ಡಿ ಹತ್ಯೆ ಮಾಡಲಾಗಿದೆ: ಜನಾರ್ದನ ರೆಡ್ಡಿ ಆರೋಪ

ಬಳ್ಳಾರಿ ಜ 7– "ಬ್ಯಾನರ್ ಗಲಾಟೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ರೆಡ್ಡಿ ಅವರನ್ನು ಉದ್ದೇಶ ಪೂರ್ವಕವಾಗಿ ಹತ್ಯೆ ಮಾಡಲಾಗಿದೆ" ಎಂದು ಗಂಗಾವತಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಅವರು ಗಂಭೀರ ಆರೋಪ ಮಾಡಿದ್ದಾರೆ.




ಜನಾರ್ದನ ರೆಡ್ಡಿ ಅವರ ನಿವಾಸದಲ್ಲಿ ಇಂದು ನಡೆದ ಮಾಧ್ಯಮಗೋಷ್ಠಿಯಲ್ಲಿ ಘಟನೆಯ ವಿಡಿಯೋ ರಿಲೀಸ್ ಮಾಡಲಾಯಿತು. ಈ ವೇಳೆ ಜನಾರ್ದನ ರೆಡ್ಡಿ ಮಾತನಾಡಿ, "ರೆಡ್ಡಿ ಜೊತೆಗೆ ನಗರ ಶಾಸಕ ಭರತ್ ರೆಡ್ಡಿ ಆಪ್ತ ಚಾನಾಳ ಶೇಖರ್ ಅವರನ್ನು ಹತ್ಯೆ ಮಾಡಿ ಜನಾರ್ದನ ರೆಡ್ಡಿ ತಲೆಗೆ ಕಟ್ಟುವ ಪ್ರಯತ್ನ ನಡೆದಿತ್ತು. ಆದರೆ, ಶೇಖರ್ ಅದೃಷ್ಟವಶಾತ್ ಪಾರಾದ. ಇದರ ರೂವಾರಿಯಾದ ನಗರ ಶಾಸಕ ಭರತ್ ರೆಡ್ಡಿ ಹಾಗೂ ಆಪ್ತ ಸತೀಶ್ ರೆಡ್ಡಿ ಅವರನ್ನು ಕೂಡಲೇ ಬಂಧಿಸಬೇಕು" ಎಂದು ಒತ್ತಾಯಿಸಿದರು.

"ಗಾಂಜಾ ಸೇವನೆ ಮಾಡಿದರೋ, ಮದ್ಯ ಸೇವಿಸಿದರೋ ಗೊತ್ತಿಲ್ಲ. ನನ್ನ ನಿವಾಸದ ಎದುರು ನಡೆದ ಗಲಾಟೆಯಲ್ಲಿ ನಾನು ಒಂದು ಕರೆ ಕೊಟ್ಟರೆ ಇಡೀ ಬಳ್ಳಾರಿ ಸುಟ್ಟು ಹೋಗುತ್ತಿತ್ತು. ಮನಸ್ಸು ಮಾಡಿದ್ರೆ ಜನಾರ್ದನ ರೆಡ್ಡಿ ಮನೆ ಸುಟ್ಟು ಹೋಗುತ್ತಿತ್ತು ಎಂದು ಶಾಸಕ ನಾರಾ ಭರತ್ ರೆಡ್ಡಿ ಹೇಳಿಕೆ ನೀಡಿದ್ದು, ಘಟನೆಯ ರೂವಾರಿ ಭರತ್ ರೆಡ್ಡಿ ಎಂತಹ ವ್ಯಕ್ತಿ ಎನ್ನುವುದು ಅವರ ಹೇಳಿಕೆ ಸಾಕ್ಷಿಕರಿಸುತ್ತದೆ" ಎಂದು ಜನಾರ್ದನ ರೆಡ್ಡಿ ಹೇಳಿದರು.

"ಶಾಸಕ ಭರತ್ ರೆಡ್ಡಿ ಹಾಗೂ ಆಪ್ತ ಸತೀಶ್ ರೆಡ್ಡಿ ನನ್ನನ್ನು ಹತ್ಯೆ ಮಾಡಲು ವ್ಯವಸ್ಥಿತ ಸಂಚು ರೂಪಿಸಿದ್ದರು. ಗಲಾಟೆ ವೇಳೆ ಸತೀಶ್ ರೆಡ್ಡಿ ಗನ್ ಮ್ಯಾನ್, ಪೋಲೀಸರು ನಡೆಸಿದ ಲಾಠಿ ಚಾರ್ಜ್ ವೇಳೆ ನೇರವಾಗಿ ರಾಜಶೇಖರ್ ರೆಡ್ಡಿ ಅವರಿಗೆ ಗುಂಡು ಹಾರಿಸಿ, ಮತ್ತೆ ಗಾಳಿಯಲ್ಲಿ ಇನ್ನೊಂದು ಗುಂಡು ಹಾರಿಸಿದ್ದ. ಘಟನೆ ವೇಳೆ ತೀವ್ರ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ರವಾನಿಸಲಾಯಿತು. ಈ ವೇಳೆ ಶಾಸಕ ಭರತ್ ರೆಡ್ಡಿ ಆಪ್ತ ಚಾನಾಳ ಅವರ ಹತ್ಯೆ ಮಾಡುವ ಸಂಚು ರೂಪಿಸಿದ್ದರು. ಅದೃಷ್ಟಕ್ಕೆ ಅದು ವಿಫಲವಾಯಿತು. ಘಟನೆಯನ್ನು ಜನಾರ್ದನ ರೆಡ್ಡಿ ಹಾಗೂ ಶ್ರೀರಾಮುಲು ಅವರ ಮೇಲೆ ಹೊರಿಸುವ ಸಂಚು ರೂಪಿಸಿದ್ದ ಭರತ್ ರೆಡ್ಡಿ ಅವರ ಉದ್ದೇಶ ಈಡೇರಲಿಲ್ಲ".

# ಪಟ್ಟಣದ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯ ಮೇಲೆ ಲೋಕದಾಳಿ



ಜನವಾದಿ ವಾರ್ತೆ

ಮಾನ್ವಿ ಜ 7– ಪಟ್ಟಣದ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯ ಮೇಲೆ ಕರ್ನಾಟಕ ಲೋಕಯುಕ್ತ ತಂಡದಿಂದ ದಾಳಿ ನಡೆಸಿ ದಾಖಲೆಗಳನ್ನು ಕರ್ನಾಟಕ ಲೋಕಯುಕ್ತ ಡಿವೈಎಸ್.ಪಿ. ಹೋಸಪೇಟೆ ಸಚೀನ್ ಛಲವಾದಿ ಪರಿಶೀಲಿಸಿದರು.

ಭೂದಾಖಲೆಗಳ ಸಹಾಯಕ ನಿರ್ದೇಶಕ ಮಹಮ್ಮದ್ ನೂರುದಿನ್ನ್ ರವರಿಂದ ಅಗತ್ಯ ದಾಖಲೆಗಳನ್ನು ಪಡೆದು ಪರಿಶೀಲಿಸಿ ರೈತರಿಂದ ಜಮೀನು ಆಳತೆ ಸೇರಿದಂತೆ ವಿವಿಧ ಖಾತೆಗಳಿಗೆ ಸಂಬಂಧಿಸಿದಂತೆ ಬಂದಿರುವ ಅರ್ಜಿಗಳು ಬಾಕಿ ಇರುವ ಅರ್ಜಿಗಳು, ತಾಂತ್ರಿಕ ತೊಂದರೆಗಳು,ಭೂಮಾಪಕರ ಹಾಗೂ ಸಿಬ್ಬಂದಿಗಳ ಕೊರತೆ,ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದು ಲೋಪಗಳು ಕಂಡು ಬಂದಲ್ಲಿ ನೋಟಿಸ್ ನೀಡಲಾಗುವುದು ಹಾಗೂ ಉನ್ನತ ಅಧಿಕಾರಿಗಳಿಗೆ ವರದಿ ನೀಡಲಾಗುವುದು ಎಂದು ತಿಳಿಸಿದರು.

# ಆರ್‌ಸೇಟಿನಿಂದ ಜೂನಿಯರ್ ಬ್ಯೂಟಿ ಪ್ರಾಕ್ಟೀಷನರ್ ತರಬೇತಿಗೆ ಅರ್ಜಿ ಆಹ್ವಾನ

ಜನವಾದಿ ವಾರ್ತೆ

ರಾಯಚೂರು ಜ 07 – ಇಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಇವರ ವತಿಯಿಂದ ಗ್ರಾಮೀಣ ನಿರುದ್ಯೋಗಿ ಮಹಿಳೆಯರಿಗಾಗಿ ಜೂನಿಯರ್ ಬ್ಯೂಟಿ ಪ್ರಾಕ್ಟೀಷನರ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಯು 2026ರ ಜನವರಿ 9ರಿಂದ ಪ್ರಾರಂಭವಾಗಿ 35ದಿನಗಳ ಕಾಲ ನಡೆಯಲಿದೆ. ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಉಚಿತ ಊಟ ಹಾಗೂ ಉಚಿತ ವಸತಿ ಸೌಕರ್ಯದ ವ್ಯವಸ್ಥೆ ಇರುತ್ತದೆ. ಆಸಕ್ತರು 10 ನೇ ತರಗತಿ ವ್ಯಾಸಂಗ ಮಾಡಿರುವ 18 ರಿಂದ 45 ವರ್ಷದೊಳಗಿನ ವಯಸ್ಸು ಹೊಂದಿರುವ ಗ್ರಾಮೀಣ ಭಾಗದ ಬಿಪಿಎಲ್ ಅಭ್ಯರ್ಥಿಗಳು ಆಧಾರ್ ಕಾರ್ಡ್ ಜೆರಾಕ್ಸ್, ಗ್ರಾಮೀಣ ಪಡಿತರ ಚೀಟಿ (ಬಿಪಿಎಲ್, ಪಿಎಚ್‌ಎಚ್, ಎನ್‌ಪಿಎಚ್‌ಎಚ್ ಮತ್ತು ಆಯ್‌ವೈ) ಜೆರಾಕ್ಸ್, 4 ಫೋಟೋಗಳು, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಹಾಗೂ ಪ್ಯಾನ್ ಕಾರ್ಡ್ ಜೆರಾಕ್ಸ್ನೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಆಶಾಪೂರು ರಸ್ತೆ, ರಾಯಚೂರು. ಅಥವಾ ಮೊಬೈಲ್ ಸಂಖ್ಯೆ: 8217382735, 9742470999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರಾದ ವಿಜಯಕುಮಾರ್ ಬಡಿಗೇರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ನಗರದಲ್ಲಿ ಜನವರಿ 9ರಂದು ವಿದ್ಯುತ್ ವ್ಯತ್ಯಯ

ಜನವಾದಿ ವಾರ್ತೆ

ರಾಯಚೂರು ಜ 07 – ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾದ ಕಂಡಕ್ಟರಿಂಗ್ ದುರಸ್ತಿ ಕಾಮಗಾರಿ ನಿರ್ವಹಿಸುತ್ತಿರುವ ಪ್ರಯುಕ್ತ ಜನವರಿ 09ರ ಬೆಳಿಗ್ಗೆ 10:30 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ ಮಾರೆಮ್ಮ ಗುಡಿ, ಬನಶಂಕರಿ ರೊಟ್ಟಿ ಕೇಂದ್ರದಿಂದ ರಾಂಪೂರು ರೋಡ್‌ವರೆಗೆ, ಮಾರೆಮ್ಮ ಗುಡಿ ರಾಂಪೂರು ರೋಡ್, ಬೆಲ್ಲಂ ಕಾಲೋನಿ ಮಿನರಲ್ ವಾಟರ್ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532-226386, 08532-231999, 9480845955 ಮತ್ತು 9448395624ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಮ ನಿರ್ದೇಶನಕ್ಕೆ ಅರ್ಜಿ ಆಹ್ವಾನ

ಜನವಾದಿ ವಾರ್ತೆ

ರಾಯಚೂರು ಜ 07 – ಅಲೆಮಾರಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಾಮಾಜಿಕ, ಶೈಕ್ಷಣಿಕ, ಮತ್ತು ಆರ್ಥಿಕ, ಸ್ಥಿತಿಗತಿ ಉತ್ತಮ ಪಡಿಸಲು ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ರಚಿಸಲಾಗಿದ್ದು, ಈ ಸಮಿತಿಗೆ 05 ಜನ ಸಮುದಾಯದ ಪ್ರತಿನಿಧಿಗಳನ್ನು ನಾಮ ನಿರ್ದೇಶನಕ್ಕೆ ಅಲೆಮಾರಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜಾತಿಯ ಆಸಕ್ತಿಯುಳ್ಳ ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸಮಿತಿಗೆ ನಾಮನಿರ್ದೇಶಿತ ಸದಸ್ಯರಾಗಲು ಇಚ್ಛಿಸಿದಲ್ಲಿ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಕಚೇರಿ ರಾಯಚೂರುನಲ್ಲಿ ಅರ್ಜಿಯನ್ನು ಜನವರಿ 12ರಿಂದ ಪಡೆದು ಭರ್ತಿ ಮಾಡಿ ಜನವರಿ 31ರೊಳಗಾಗಿ ಸಲ್ಲಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರ್ನಾಟಕ ಜಾನಪದ ಅಕಾಡೆಮಿಯಿಂದ ಫೆಲೋಶಿಪ್‌ಗೆ ಅರ್ಜಿ ಆಹ್ವಾನ

ಜನವಾದಿ ವಾರ್ತೆ

ರಾಯಚೂರು ಜ 07 – ಕರ್ನಾಟಕ ಜಾನಪದ ಅಕಾಡೆಮಿಯು ಫೆಲೋಶಿಪ್ (ಅಧ್ಯಯನ ವೇತನ) ಲೇಖನಗಳಿಗೆ ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯ ವೆಬ್‌ಸೈಟ್ ವಿಳಾಸ: (https://janapada.karnataka.gov.in) ನಲ್ಲಿ ತಿಳಿಸಿರುವ ಶಿರ್ಷಿಕೆಗಳನ್ನು ಆಧರಿಸಿ ಕ್ಷೇತ್ರಕಾರ್ಯ ನಡೆಸಿ ಅಧ್ಯಯನ ಕೃತಿಗಳನ್ನು ಸಿದ್ಧಪಡಿಸಿಕೊಡಲು ಆಸಕ್ತ ಅಭ್ಯರ್ಥಿಗಳು ನಿಗದಿಪಡಿಸಿರುವ ಒಂದು ಶೀರ್ಷಿಕೆಯನ್ನು ಆಯ್ಕೆ ಮಾಡಿ 5 ಪುಟಗಳ ಸಾರಲೇಖ (Synopsis)ವನ್ನು ಬರೆದು ಜನವರಿ 223ರೊಳಗಾಗಿ ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಎರಡನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು – 560002 ಇವರಿಗೆ ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು: ಶ್ರೇಷ್ಠ ಕೃಷಿಕ, ಕೃಷಿ ಮಹಿಳೆ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನ

ಜನವಾದಿ ವಾರ್ತೆ

ರಾಯಚೂರು ಜ 05 – ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು 2026ರ ಜನವರಿ ತಿಂಗಳಿನಲ್ಲಿ ರಾಯಚೂರು ಮುಖ್ಯ ಆವರಣದಲ್ಲಿ "ಕೃಷಿ ಮೇಳ" ಆಯೋಜಿಸುತ್ತಿದೆ. ಕೃಷಿಗೆ ಸಂಬಂಧಿಸಿದ ಹೊಸ ತಂತ್ರಜ್ಞಾನಗಳ ಬಗ್ಗೆ ರೈತ ಬಾಂಧವರಿಗೆ ಮಾಹಿತಿ ಒದಗಿಸುವುದು ಹಾಗೂ ಅವುಗಳನ್ನು ಅಳವಡಿಸಲು ಪ್ರೇರೇಪಿಸುವ ಉದ್ದೇಶ ಈ ಮೇಳದ್ದಾಗಿದೆ. ಈ ಮೇಳದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಪ್ರತಿ ಜಿಲ್ಲಾವಾರು ಶ್ರೇಷ್ಠ ಕೃಷಿಕ ಹಾಗೂ ಕೃಷಿ ಮಹಿಳೆಯನ್ನು ಗುರುತಿಸಿ ಪ್ರಮಾಣ ಪತ್ರವನ್ನು ನೀಡಿ ಸನ್ಮಾನಿಸಲಾಗುವುದು. ಇದರ ಪ್ರಯುಕ್ತ ಅರ್ಜಿ ನಮೂನೆಯನ್ನು ಆಯಾ ಜಿಲ್ಲೆಗಳ ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಹಾಗೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರುನ ವೆಬ್ ಸೈಟ್ **https://uasraichur.karnataka.gov.in** ನಲ್ಲಿ ದಿನಾಂಕ: 01.01.2026 ರಿಂದ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ & ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ರಾಯಚೂರು, ಬೀದರ, ಕಲಬುರಗಿ, ರದ್ದೇವಾಡಗಿ, ಗಂಗಾವತಿ, ಕವಡಿಮಟ್ಟಿ, ಹಗರಿ ಮತ್ತು ಮುಖ್ಯಸ್ಥರು, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಭೀಮರಾಯನಗುಡಿ, ಲಿಂಗಸೂಗೂರು, ಕೊಪ್ಪಳ, ನಾಲವಾರ, ದೇವದುರ್ಗ ಮತ್ತು ಹೂವಿನಹಡಗಲಿ ಇವರನ್ನು ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9480696314, 9480696315, 9480696316, 9480696317, 9480696318, 9480696319, 9480696334, 9480696335, 9480696336ಗಳಿಗೆ ಸಂಪರ್ಕಿಸಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಹಿಂತಿರುಗಿಸಲು ಜನವರಿ 16 ಕೊನೆಯ ದಿನವಾಗಿರುತ್ತದೆ. ಅರ್ಜಿಗಳನ್ನು ಆಯಾ ಜಿಲ್ಲೆಗಳ ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ ಎಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿದ್ದರಾಮಯ್ಯ ಮತ್ತು ದೇವರಾಜ ಅರಸು ಹೋಲಿಕೆ ಸರಿಯಲ್ಲ – ಯಡಿಯೂರಪ್ಪ ಆಕ್ಷೇಪ

ಬೆಂಗಳೂರು ಜ 7– ಭ್ರಷ್ಟಾಚಾರವೇ ತುಂಬಿತುಳುಕುತ್ತಿರುವ ಕಾಂಗ್ರೆಸ್ ಸರ್ಕಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಾಜಿ ಸಿಎಂ ದೇವರಾಜ ಅರಸು ಅವರಿಗೆ ಹೋಲಿಕೆ ಮಾಡುವುದು ಸರಿಯಲ್ಲ ಎಂದು ಮಾಜಿ ಸಿಎಂ ಬಿ.ಎಸ್ .ಯಡಿಯೂರಪ್ಪ ಆಕ್ಷೇಪಿಸಿದ್ದಾರೆ.




ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟಾಚಾರ ತುಂಬಿತುಳುಕುತ್ತಿದೆ ಎಲ್ಲಾ ರಂಗಗಳಲ್ಲಿ ಈ ಸರ್ಕಾರ ಸಂಪೂರ್ಣವಾಗಿ ಬಲವಾಗಿದೆ. ಸಿದ್ದರಾಮಯ್ಯ ಸರ್ಕಾರವನ್ನು ಅರಸು ಅವರ ಕಾಲಕ್ಕೆ ಹೋಲಿಕೆ ಮಾಡುವುದು ಎಷ್ಟರಮಟ್ಟಿಗೆ ಸರಿ ಎಂದು ಪ್ರಶ್ನೆ ಮಾಡಿದರು.

ದೇವರಾಜ ಅರಸು ಅವರು ತಮ ಅಧಿಕಾರಾವಧಿಯಲ್ಲಿ ಪ್ರತಿಯೊಂದು ಸಮುದಾಯಕ್ಕೂ ಸಾಕಷ್ಟು ಉತ್ತಮವಾದ ಕೆಲಸ ಮಾಡಿದ್ದರು. ಆದರೆ ಸಿದ್ದರಾಮಯ್ಯ ತಮ ಅವಧಿಯಲ್ಲಿ ಯಾರಿಗಾದರೂ ಒಂದು ಒಳ್ಳೆಯ ಕೆಲಸ ಮಾಡಿದ್ದಾರಾ? ಅರಸು ಎಲ್ಲಿ? ಇವರೆಲ್ಲಿ? ಎಂದು ಪ್ರಶ್ನಿಸಿದರು.

ನನ್ನ ಪ್ರಕಾರ ಸಿದ್ದರಾಮಯ್ಯ ಅವರು ಹೆಚ್ಚು ಕಾಲ ಆಡಳಿತ ನಡೆಸಿದ ಸಿಎಂ ಎಂಬ ಹೆಗ್ಗಳಿಕೆಗೆ ಪಾತ್ರ ಆಗಿರಬಹುದು. ಆದರೆ ಸಿಕ್ಕಿರುವ ಅಧಿಕಾರ ಅವಧಿಯಲ್ಲಿ ಜನರಿಗೆ ಒಂದು ಒಳ್ಳೆಯ ಕೆಲಸವನ್ನೂ ಮಾಡಿಲ್ಲ. ಅರಸು ಅವರು ತಮ ಅಧಿಕಾರ ಅವಧಿಯನ್ನು ಜನರಿಗೆ ಮುಡುಪಾಗಿಟ್ಟಿದ್ದರು. ಭ್ರಷ್ಟಾಚಾರವನ್ನು ತಾಂಡವ ಮಾಡುತ್ತಿರುವ ಈ ಸರ್ಕಾರದಲ್ಲಿ ಅಂತಹ ದಿಗ್ಗಜರ ಸಾಲಿಗೆ ಹೋಲಿಕೆ ಮಾಡುವುದು ಸರಿಯೇ ಎಂದು ಕಿಡಿಕಾರಿದರು.

ಸರ್ಕಾರ ಯಾವ ಸಾಧನೆಯನ್ನು ಮಾಡದಿದ್ದರೂ ದೊಡ್ಡ ಸಾಧನೆ ಮಾಡಿದ್ದೇವೆ ಎಂದು ಹೊರಟಿದ್ದಾರೆ. ಯಾವ ಪುರುಷಾರ್ಥಕ್ಕೆ ಇವರು ಸಮಾವೇಶ ನಡೆಸುತ್ತಾರೆಯೋ ಗೊತ್ತಿಲ್ಲ. ಜನರ ಹಣವನ್ನು ಖರ್ಚು ಮಾಡಿ ಸಮಾವೇಶ ನಡೆಸುವ ಅಗತ್ಯವಾದರೂ ಏನಿದೆ ಎಂದು ಆಕ್ಷೇಪಿಸಿದರು.

ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ, ಜೆಡಿ–ಎಸ್ ಒಂದಾಗಿ ಕೆಲಸ ಮಾಡಿ ರಾಜ್ಯದಲ್ಲಿ ಸುಮಾರು 140 ರಿಂದ 150 ಸ್ಥಾನಗಳನ್ನು ಗೆಲ್ಲಲು ಶ್ರಮ ಹಾಕುತ್ತೇವೆ. ಎರಡೂ ಪಕ್ಷಗಳು ಒಟ್ಟಾಗಿ ಕೆಲಸ ಮಾಡಿದರೆ ಗೆಲ್ಲುವುದು ಅಸಾಧ್ಯವಲ್ಲ ಎಂದರು.ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಎರಡೂ ಪಕ್ಷಗಳೂ ಒಂದಾಗಿ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಅಗತ್ಯವಿದೆ ಅದನ್ನು ಗೆದ್ದು ತೋರಿಸುತ್ತೇವೆ. ಹೀಗಾಗಿ ಇಂದಿನಿಂದಲೇ ಪಕ್ಷ ಸಂಘಟನೆಗೆ ಒತ್ತು ಕೊಡುತ್ತಿದ್ದೇವೆ ಎಂದು ಹೇಳಿದರು.

ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬಿಜೆಪಿ–ಜೆಡಿಎಸ್ ಒಟ್ಟಾಗಿ ಕೆಲಸ ಮಾಡುವ ಅಗತ್ಯವಿದೆ. ಸಣ್ಣಪುಟ್ಟ ವ್ಯತ್ಯಾಸಗಳಿದ್ದರೂ ಕಾಂಗ್ರೆಸ್ ವಿರುದ್ಧ ಒಂದಾಗಬೇಕಾದ ಅಗತ್ಯವಿದೆ. ನಾವು ಹೆಚ್ಚು ಸ್ಥಾನ ಗೆದ್ದರೆ ಅದು ವಿಧಾನಸಭೆ ಚುನಾವಣೆಗೆ ಅನುಕೂಲವಾಗಲಿದೆ ಎಂದು ಯಡಿಯೂರಪ್ಪ ಅಭಿಪ್ರಾಯಪಟ್ಟಿದ್ದಾರೆ.

# ರಾಯಚೂರು ಉತ್ಸವ: ಜ.17, 18 ರಂದು ವಾಲಿಬಾಲ್, ಕಬಡ್ಡಿ ಸ್ಪರ್ಧೆ

ಜನವಾದಿ ವಾರ್ತೆ

ರಾಯಚೂರು ಜ 07 – ರಾಯಚೂರು ಜಿಲ್ಲೆಯಲ್ಲಿ ಜನವರಿ–2026ರ ಮಾಹೆಯಲ್ಲಿ ಜರಗುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026 ಕಾರ್ಯಕ್ರಮದಲ್ಲಿ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿದೆ.

ಜನವರಿ 17ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ಬೆಳಗ್ಗೆ 9 ಗಂಟೆಗೆ ರಾಜ್ಯ ಮಟ್ಟದ ವಾಲಿಬಾಲ್ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿದೆ. ಆಸಕ್ತರು ಈ ಪಂದ್ಯಗಳ ನೋಡಲ್ ಅಧಿಕಾರಿಗಳಾದ ಟಿಪಿಇಒ ಮಾರುತಿ ಮೊ.ಸಂಖ್ಯೆ:9986121146 ಅಥವಾ ದೈಹಿಕ ಶಿಕ್ಷಕರಾದ ಮುಕ್ತರ್ ಅಹ್ಮದ್ ಅವರ ಮೊ.ಸಂಖ್ಯೆ:8050224221ಗೆ ಸಂಪರ್ಕಿಸಿ ತಂಡದ ಹೆಸರು ನೋಂದಾಯಿಸಬಹುದಾಗಿದೆ.

ಜನವರಿ 18ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ಬೆಳಗ್ಗೆ 9 ಗಂಟೆಗೆ ಕಬ್ಬಡಿಸ್ಪರ್ಧೆಯನ್ನು ಆಯೋಜನೆ ಮಾಡಲಾಗಿದೆ. ಆಸಕ್ತರು ಈ ಪಂದ್ಯಗಳ ನೋಡಲ್ ಅಧಿಕಾರಿಗಳಾದ ದೇವದುರ್ಗದ ಟಿಪಿಇಒ ಮುದುಕನ್ನ ಕವಡಿಮಟ್ಟಿ ಮೊ.ಸಂಖ್ಯೆ: 9448619792 ಅಥವಾ ದೈಹಿಕ ಶಿಕ್ಷಕರಾದ ಉಮೇಶ ಮೊ.ಸಂಖ್ಯೆ: 9448218095ಗೆ ಸಂಪರ್ಕಿಸಿ ತಂಡದ ಹೆಸರು ನೋಂದಾಯಿಸಬಹುದಾಗಿದೆ.

ಕ್ರೀಡೆಗಳಲ್ಲಿ ಆಸಕ್ತರು ಭಾಗವಹಿಸಿ ರಾಯಚೂರು ಜಿಲ್ಲೆ ಹೆಮ್ಮೆಪಡುವಂತಹ ಕ್ರೀಡೋತ್ಸವ ಮೂಡಿಬರಲು ಸಹಕರಿಸಿ ರಾಯಚೂರು ಉತ್ಸವವನ್ನು ಯಶಸ್ವಿಗೊಳಿಸಲು ಎಲ್ಲಾ ಕ್ರೀಡಾಪಟುಗಳು ಮತ್ತು ಸಾರ್ವಜನಿಕರಲ್ಲಿ ವಿನಂತಿಸಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳ ಜೀವನದ ಗುರಿಸಾಧನೆಗೆ ಬಾಲ್ಯವಿವಾಹದಿಂದ ಅಡ್ಡಿ –ಡಾ ರಮೇಶ

ಜನವಾದಿ ವಾರ್ತೆ

ರಾಯಚೂರು ಜ 07 – ಬಾಲ್ಯ ವಿವಾಹವು ಮುಖ್ಯವಾಗಿ ಹೆಣ್ಣುಮಕ್ಕಳ ಶಿಕ್ಷಣ, ಆರೋಗ್ಯ ಮತ್ತು ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಅಲ್ಲದೆ ಪಾಲಕರು ತಮ್ಮ ಮಗಳು ಅಥವಾ ಮಗನಿಗೆ ಬಾಲ್ಯ ವಿವಾಹ ಮಾಡುವುದರಿಂದ ಅವರ ಉನ್ನತ ಸಾಧನೆಗೆ ಪಾಲಕರೆ ಅಡ್ಡಿಪಡಿಸಿದಂತೆ, ಮಕ್ಕಳ ಜೀವನದ ಉನ್ನತ ಗುರಿ ಸಾಧನೆಗಾಗಿ ಹೆಣ್ಣಿಗೆ 18 ವರ್ಷ ಗಂಡಿಗೆ 21 ವರ್ಷ ತುಂಬುವವರೆಗೂ ಮದುವೆ ಮಾಡದಂತೆ ಮುಂದಾಗಬೇಕು ಎಂದು ಕಲ್ಮಲ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ರಮೇಶ್ ತಿಳಿಸಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಸಂಯೋಗದಲ್ಲಿ ಇತ್ತಿಚೀಗೆ ತಾಲೂಕಿನ ಕಲ್ಮಲ ಗ್ರಾಮದ ಮೇಟ್ರಿಕ್ ಪೂರ್ವ ವಸತಿ ನಿಲಯದಲ್ಲಿ ಪ್ರೌಢ ಶಾಲಾ ಮಕ್ಕಳಿಗೆ ಹಮ್ಮಿಕೊಂಡ ಬಾಲ್ಯವಿವಾಹ ತಡೆ ಹಾಗೂ ಪೋಕ್ಸೊ ಕಾಯ್ದೆಯ ಜಾಗೃತಿ ಕುರಿತು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಖ್ಯವಾಗಿ ಹೆಣ್ಣು ಮಕ್ಕಳಿಗೆ ಋತುಚಕ್ರ ಆರಂಭವಾದ ತಕ್ಷಣ ಮದುವೆ ಮಾಡುವ ದುಡುಕಿನ ನಿರ್ಧಾರಗಳಿಂದ ದೈಹಿಕವಾಗಿ ಗರ್ಭಕೋಶವು ಪೂರ್ಣ ಪ್ರಮಾಣದಲ್ಲಿ ಬೆಳವಣಿಗೆಯಾಗದೆ ಗರ್ಭಪಾತ, ಮಗು ಸತ್ತು ಹುಟ್ಟುವುದು, ದಿನತುಂಬದ ಹೆರಿಗೆ, ಬಾಲ್ಯದಲ್ಲಿ ಅಪೌಷ್ಟಿಕತೆ, ಅಕಾಲಿಕ ಗರ್ಭಧಾರಣೆ, ಹೆ-ರಿಗೆಯಲ್ಲಿನ ತೊಡಕುಗಳು, ಮಗುವಿನ ಲಾಲನೆ ಪಾಲನೆಯ ಮಾಹಿತಿ ಕೊರತೆ ಕಾರಣದಿಂದ ಮಗು ಅಪೌಷ್ಟಿಕತೆಗೆ ತುತ್ತಾಗುತ್ತದೆ. ಈ ಹಿನ್ನಲೆ ಬಾಲ್ಯ ವಿವಾಹ ತಡೆ ಎಲ್ಲರೂ ಶ್ರಮಿಸೋಣವೆಂದು ತಿಳಿಸಿದರು.

ಶಾಲಾ ಮುಖ್ಯಗುರು ಚಿತ್ರಾಬಾಯಿ ಮಾತನಾಡಿ ಬಾಲ್ಯದಲ್ಲಿ ಮದುವೆ ಮಾಡುವುದರಿಂದ ಹೆಣ್ಣು ಮಗು ಕೌಟುಂಬಿಕ ಹಿಂಸೆ ಮತ್ತು ಮಾನಸಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಅಲ್ಲದೆ ಇದು ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗಿದ್ದು, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಅಡ್ಡಿ. ಅಲ್ಲದೆ ಹೆಣ್ಣು ಮಗುವಿಗೆ 18 ವರ್ಷ ತುಂಬುವುದರೊಳಗೆ ಮದುವೆ ಮಾಡಿದಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ–2006ರ ಪ್ರಕಾರ ಗಂಡಿನ ಮನೆಯವರಿಗೆ, ಮದುವೆ ಮಾಡಿಸಿದವರಿಗೆ, ಭಾಗಿಯಾದವರಿಗೆ 1 ಲಕ್ಷ ದಂಡ ಹಾಗೂ 2 ವರ್ಷ ಜೈಲು ಶಿಕ್ಷೆ ವಿಧಿಸಲಾಗುವುದು ಎಂಬುದನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕಿದೆ ಎಂದರು.

ಈ ವೇಳೆ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ಅವರು ಮಾತನಾಡಿ, ಪ್ರತಿ ಮನುಷ್ಯನ ಜೀವನದಲ್ಲಿ ಸಾಮಾನ್ಯವಾಗಿ 10–19 ವರ್ಷಗಳ ವಯೋಮಾನ ಅತ್ಯಂತ ಸೂಕ್ಷ್ಮ ಕಾಲ ಘಟ್ಟವಾಗಿದೆ. ಈ ಹಂತದಲ್ಲಿ ಹಾರ್ಮೋನುಗಳ ಬದಲಾವಣೆಯೊಂದಿಗೆ ಉಂಟಾಗುವ ಧ್ವನಿ ಬದಲಾವಣೆ, ಬಾಲಕರಲ್ಲಿ ಮಿಸೆ ಗಡ್ಡಗಳ ಕಾಣಿಸುವಿಕೆ, ಬಾಲಕಿಯರಲ್ಲಿ ಋತುಚಕ್ರ ಆರಂಭವಾಗುವ ಜೊತೆಗೆ ದೈಹಿಕ ಬದಲಾವಣೆ, ಕಂಕುಳದಲ್ಲಿ ಕೂದಲುಗಳ ಕಾಣಿಸುವಿಕೆ ಸೇರಿದಂತೆ ಮುಖದಲ್ಲಿ ಮೊಡುವೆಗಳು ಕಂಡು ಬರಲಾರಂಬಿಸುತ್ತವೆ. ಇವೆಲ್ಲವುಗಳು ಹದಿಹರೆಯದ ಸಂಕೇತವಾದರೆ, ದೈಹಿಕ ಆಕರ್ಷಣೆಗೆ ಒಳಗಾಗುವ ಸೂಕ್ಷ್ಮ ಅಂಶದ ಕುರಿತು ಅದರ ಸಾಧಕ–ಭಾದಕಗಳ ಬಗ್ಗೆ ಹೆಚ್ಚು ಜಾಗೃತಿ ವಹಿಸಬೇಕಿದೆ. ಅಲ್ಲದೆ ಮಕ್ಕಳ ಏಳ್ಗೆಗಾಗಿ ಹಗಲಿರಳು ತಂದೆ–ತಾಯಿ ಶ್ರಮಿಸುವುದನ್ನು ನಾವು ಕಾಣುತ್ತೇವೆ. ಮಕ್ಕಳು ಉನ್ನತ ಹುದ್ದೆ, ಸ್ಥಾನಮಾನ ಪಡೆಯಲಿ ಎಂಬ ಮಹಾದಾಸೆ ಇರುತ್ತದೆ. ಈ ದಿಶೆಯಲ್ಲಿ ಸರಿಯಾದ ಪೌಷ್ಟಿಕಾಹಾರ ಸೇವನೆ, ವ್ಯಾಯಾಮ, ಯೋಗಗಳೊಂದಿಗೆ ಶ್ರದ್ಧೆಯಿಂದ ಓದಿನ ಕಡೆ ಗಮನ ನೀಡುವ ಮೂಲಕ ಪ್ರತಿ ಆರು ತಿಂಗಳಿಗೊಮ್ಮೆ ಜಂತುಹುಳು ಮಾತ್ರೆ, ಪ್ರತಿವಾರಕ್ಕೊಮ್ಮೆ ಕಬ್ಬಿಣಾಂಶ ಮಾತ್ರೆ ಸೇವಿಸಿ ದೇಹದಲ್ಲಿ ಕಬ್ಬಿಣಾಂಶದ ಕೊರತೆಯಾಗದಂತೆ ಮುತವರ್ಜಿ ವಹಿಸಬೇಕೆಂದರು.

**ಸ್ನೇಹಾ ಕ್ಲಿನಿಕ್ ಸದ್ಬಳಕೆ ಮಾಡಿಕೊಳ್ಳಿ:** ರಾಷ್ಟ್ರೀಯ ಕಿಶೋರಿ ಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ ಸ್ನೇಹಾ ಕ್ಲಿನಿಕ್‌ಗಳ ಮೂಲಕ ಹದಿಹರೆಯದ ಆರೋಗ್ಯ ಸಮಸ್ಯೆಗಳಿಗೆ ಆಪ್ತ ಸಮಾಲೋಚನೆಗಾಗಿ ಆರೋಗ್ಯ ಕೇಂದ್ರಗಳಲ್ಲಿ ಅವಕಾಶ ಕಲ್ಪಿಸಿದ್ದು, ಇದರ ಸದುಪಯೋಗ ಪಡೆದುಕೊಳ್ಳಲು ಹಾಗೂ ತಂಬಾಕು ಉತ್ಪನ್ನಗಳ ಸೇವನೆಯ ದುಷ್ಪರಿಣಾಮಗಳ ಬಗ್ಗೆ ತಿಳಿಸಲಾಯಿತು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ನಿಲಯ ಪಾಲಕರಾದ ರಂಗನಾಥ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಭಾನುಕಾಂತ ರೆಡ್ಡಿ, ಹಿರಿಯ ಪಿಹೆಚ್‌ಸಿಓ ರೇಣುಕಾ, ಶಿಕ್ಷಕರಾದ ರಮೇಶ, ಪಿಹೆಚ್‌ಸಿಓ ರಸೂಲ್‌ಬಿ, ಹೆಚ್‌ಐಓ ಮಹಾಲಕ್ಷ್ಮಿ, ಆಶಾ ಕಾರ್ಯಕರ್ತೆ ಶಂಕ್ರಮ್ಮ, ನಾಗಮ್ಮ ಸೇರಿದಂತೆ ಶಾಲಾ ಮಕ್ಕಳು ಇದ್ದರು.

# ಜ.12 ರಂದು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಉಪವಾಸ ಸತ್ಯಾಗ್ರಹ – ಗುರುರಾಜ್ ನಾಗಲಾಪುರ್




ಜನವಾದಿ ವಾರ್ತೆ

ಮಾನ್ವಿ ಜ 7– ಪಟ್ಟಣದ ಪತ್ರಿಕಾ ಭವನದಲ್ಲಿ ಸಮಾಜ ಸೇವಕರಾದ ಗುರುರಾಜ್ ನಾಗಲಾಪುರ್ ಮಾತನಾಡಿ ಪಟ್ಟಣದ ಚೀಕಲಪರ್ವಿ ರಸ್ತೆಯಲ್ಲಿ ಬರುವ ಕೋನಾಪುರ ಪೇಟೆ ಅಭಿವೃದ್ದಿಯಲ್ಲಿ ವಂಚಿತವಾಗಿದ್ದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದರು ಕೂಡ ಸಂಬದಿಸಿದ ಅಧಿಕಾರಿಗಳು ಸ್ಪಂದಿಸದೆ ಇರುವುದರಿಂದ ಜ.12 ರಂದು ಕೋನಾಪುರ ಪೇಟೆಯಲ್ಲಿನ ಅಂಬೇಡ್ಕರ್ ನಗರದಲ್ಲಿ ಉಪವಾಸ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗುವುದು. ಚೀಕಲಪರ್ವಿ ರಸ್ತೆಯಲ್ಲಿ ಪ್ರತಿದಿನ ಬಾರಿ ವಾಹನಗಳ ಸಂಚಾರ ದಿಂದಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು ವಾಹನ ದಟ್ಟಣೆ ನಿವಾರಣೆಗಾಗಿ ಬೈಪಾಸ್ ರಸ್ತೆಯನ್ನು ನಿರ್ಮಾಣ ಮಾಡಬೇಕು. ಪುರಸಭೆ ವತಿಯಿಂದ ನಿರಂತರವಾಗಿ ಶುದ್ದವಾದ ಕುಡಿಯುವ ನೀರಿನ ಪೂರೈಕೆಗಾಗಿ ಕ್ರಮ ಕೈಗೊಳ್ಳಬೇಕು. ರಸ್ತೆಯಲ್ಲಿ ದೂಳು ಬಾರದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು, ಪ್ರವಾಸಿ ಮಂದಿರದ ಹತ್ತಿರ ವಿರುವ ಸರ್ಕಾರಿ ಜಾಗದಲ್ಲಿ ಉದ್ಯಾನವನ ನಿರ್ಮಾಣ ಮಾಡಬೇಕು, ಆರೋಗ್ಯ ಇಲಾಖೆಯಿಂದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೌಲಭ್ಯ ಕಲ್ಪಿಸುವುದಕ್ಕಾಗಿ ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು, ಅಗತ್ಯ ತಜ್ಞ ವೈದ್ಯರನ್ನು ಹಾಗೂ ಸಿಬ್ಬಂದಿಗಳನ್ನು ನೇಮಕಮಾಡಬೇಕು, ಪುರಸಭೆ ವತಿಯಿಂದ ಐತಿಹಾಸಿಕ ಸಂಜಿವರಾಯ ದೇವಸ್ಥಾನದ ಹತ್ತಿರ ತ್ಯಾಜ್ಯ ಸುರಿಯುತ್ತಿರುವುದರಿಂದ ಭಕ್ತರಿಗೆ ಅನಾನುಕೂಲವಾಗುತ್ತಿದ್ದು ಸ್ಥಳಾಂತರ ಮಾಡುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು. ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇ-ರಿಸುವಂತೆ ಒತ್ತಾಯಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ನರಸಿಂಹ ಹೆಳವರ್,ವೆಂಕಟೇಶ ಯಾದವ್, ಆನಿಲ್ ಗೌಡ, ವೀರೇಶ ಯಾದವ, ಈಶಪ್ಪ, ಶಿವು ಇದ್ದರು.

# ಸಿಎಂರಿಂದ ಜನಪರ ಆಡಳಿತ – ಶಿವಶಂಕರಗೌಡ



ಜನವಾದಿ ವಾರ್ತೆ

ಮುದಗಲ್ ಜ 7– ರಾಜ್ಯದ ಅಹಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಂದ ಅನೇಕ ಸಾಮಾನ್ಯರ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಜನಪರ ಆಡಳಿತ ಮಾಡಿದ್ದಾರೆ ಎಂದು ಮುದಗಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶಂಕರಗೌಡ ಗೌಡರ ಹೇಳಿದರು.

ಸಿಎಂ ಸಿದ್ದರಾಮಯ್ಯ ರವರು ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ಅವಧಿಯಲ್ಲಿ ಮುಖ್ಯಮಂತ್ರಿಯಾದ ಹಿನ್ನಲೆಯಲ್ಲಿ ಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರ, ಕಾರ್ಯಕರ್ತರ, ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಸುಮಾರು 7 ವರ್ಷಗಳ ಕಾಲ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಅಧಿಕಾರ ಮಾಡಿದ್ದಾರೆ ಹಾಗೂ ಈ ಬಾರಿ ಐದು ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಜಾರಿಯಾಗಿರುವುದರಿಂದ ಬಡಜನರ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದರು

ಇದೆ ವೇಳೆ ಸಿಎಂ ಸಿದ್ದರಾಮಯ್ಯ ಹಾಗೂ ಸಂವಿಧಾನ ಶಿಲ್ಪಿ ಡಾ: ಬಿ, ಆರ್, ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಹೂ ಮಾಲೆ ಹಾಕಿ ಪೂಜೆ ಸಲ್ಲಿಸಿ ಪಟಾಕಿ ಸಿಡಿಸಿ ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ಮಾಡಿದರು.

ಈ ಸಂದರ್ಭದಲ್ಲಿ ಪ್ರಚಾರ ಸಮಿತಿ ಅಧ್ಯಕ್ಷ ಅರುಣಕುಮಾರ ಯರದಿಹಾಳ, ಯುವ ಘಟಕ ಅಧ್ಯಕ್ಷ ಅಬ್ದುಲ್ ಖದೀರ, ತಾ, ಪಂ ಕೆಡಿಪಿ ಸದಸ್ಯ ರಾಘವೇಂದ್ರ ಕುದರಿ,ಪ್ರಧಾನ ಕಾರ್ಯದರ್ಶಿ ಹುಸೇನ ಬಾಷಾ,ಸಂಗಪ್ಪ ಹಿರೇಮನಿ, ಎಸ್ಸಿ ಘಟಕ ಅಧ್ಯಕ್ಷ ಕೃಷ್ಣ ಚಲುವಾದಿ,ಮಂಜುನಾಥ ಬನ್ನಿಗೋಳಕರ, ಮಾಹಾಂತೇಶ ಬೋವಿ, ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಇದ್ದರು.

# ಪ್ರತಿಭಾ ಕಾರಂಜಿಯಲ್ಲಿ ಉತ್ತಮ ಸಾಧನೆ



ಜನವಾದಿ ವಾರ್ತೆ

ಮುದಗಲ್ ಜ 6– ಇತ್ತೀಚಿಗೆ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಪಟ್ಟಣದ ಸಮೀಪದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಜನತಾಪುರ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ 3 ಸ್ಪರ್ಧೆಗಳಲ್ಲಿ ವಿಜೇತರಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ.

ಕುಮಾರಿ ಮಹಾದೇವಿ ಧಾರ್ಮಿಕ ಪಠಣ ಸಂಸ್ಕೃತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ,ಛದ್ಮ ವೇಷ ಸ್ಪರ್ಧೆಯಲ್ಲಿ ಶ್ರೀ ರಾಘವೇಂದ್ರ ವೇಷಧಾರಿ ಯಾಗಿ ದ್ವಿತೀಯ ಸ್ಥಾನ ಪಡೆದ ಕುಮಾರ್ ಅಮರೇಶ್, ಕಥೆ ಹೇಳುವ ಸ್ಪರ್ಧೆಯಲ್ಲಿ ಕುಮಾರ್ ಅಶೋಕ್ 7 ನೇ ತರಗತಿ ದ್ವಿತೀಯ ಸ್ಥಾನ ಪಡೆದಿದ್ದಾಕ್ಕಾಗಿ ಶಾಲಾ ಸಿಬ್ಬಂದಿ ವರ್ಗ ಹಾಗೂ ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಗುರು ಗುರುಬಸಪ್ಪ ಎಸ್ಡಿಎಂಸಿ ಅಧ್ಯಕ್ಷ ಅಮರೇಗೌಡ ಪಾಟೀಲ್ ಶಿಕ್ಷಕ ಮೌನೇಶ ಆಚಾರಿ ರವರು ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ಮಕ್ಕಳಿಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

# ಗ್ರಾಮೀಣ ಭಾಗದ ಆಸ್ಪತ್ರೆಗಳಲ್ಲಿ ತಜ್ಞವೈದ್ಯರ ನೇಮಕ ಮಾಡಿ: ಶ್ಯಾಮಸುಂದರ ಕಂಬದಾಳ್

ಜನವಾದಿ ವಾರ್ತೆ

ಮಾನ್ವಿ ಜ 7– ಪಟ್ಟಣದ ತಹಸೀಲ್ದಾರ ಕಚೇರಿಯುಲ್ಲಿ ಬಹುಜನ ಸಮಾಜ ಪಾರ್ಟಿ ವತಿಯಿಂದ ರಾಜ್ಯ ಆರೋಗ್ಯ ಸಚಿವರಿಗೆ ಉಪತಹಸೀಲ್ದಾರ ವಿನಾಯಕರಾವ್ ರವರ ಮೂಲಕ ಮನವಿ ಸಲ್ಲಿಸಿ ರಾಜ್ಯ ಕಾರ್ಯದರ್ಶಿ ಶ್ಯಾಮಸುಂದರ್ ಕಂಬದಾಳ್ ಮಾತನಾಡಿ ರಾಜ್ಯದ ಗ್ರಾಮೀಣ ಭಾಗದಲ್ಲಿನ 270 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿನ ಅರವಳಿಕೆ,ಮಕ್ಕಳ ತಜ್ಞರು,ಸ್ರೀರೋಗ ತಜ್ಞರನ್ನು ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿನ ವೈದ್ಯರ ಕೊರತೆ ನಿವಾರಣೆಗಾಗಿ ವರ್ಗಹಿಸುವುದಕ್ಕೆ ರಾಜ್ಯದ ಆರೋಗ್ಯ ಇಲಾಖೆ ಮುಂದಾಗಿರುವುದರಿಂದ ಗ್ರಾಮೀಣ ಭಾಗದ ಜನರು ಅಗತ್ಯ ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾಗಲಿದ್ದಾರೆ. ರಾಜ್ಯ ಸರ್ಕಾರವು ಬಡಜನರಿಗೆ ಅಗತ್ಯವಿರುವ ಜನ ಔಷಾಧಿ ಕೇಂದ್ರಗಳನ್ನು ಮುಚ್ಚಿದು ಇಂದುಸಮುದಾಯ ಆರೋಗ್ಯ ಕೇಂದ್ರಗಳಲ್ಲಿನ ವೈದ್ಯರನ್ನು ತಾಲೂಕು ಆಸ್ಪತ್ರೆಗಳಿಗೆ ನೀಡುವ ಮೂಲಕ ಗ್ರಾಮೀಣ ಭಾಗದ ಬಡ ಜನರ ಆರೋಗ್ಯದ ಮೇಲೆ ಗಂಭಿರವಾದ ಪರಿಣಾಮವಾಗಲಿರುವುದ-ರಿಂದ ರಾಜ್ಯದ ಆರೋಗ್ಯ ಇಲಾಖೆಯು ಪುನರ್ ಪರಿಶೀಲಿಸಿ ಜನಪರವಾದ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.ಬಿ.ಎಸ್.ಪಿ, ತಾ.ಉಪಾಧ್ಯಕ್ಷರಾದ ವೆಂಕಟೇಶ ನಂದಿಹಾಳ್,ವಿರುಪನಗೌಡ ಜಟ್ಟಿ,ಹನುಮಂತ,ದುರ್ಗೇಶ ನೀರಮಾನ್ವಿ ಇದ್ದರು.



# ಮನಸೂರೆಗೊಂಡ ರಂಗತರಬೇತಿ ಶಿಬಿರ..

ನಾಟಕ ನೋಡೋದು ನನಗೆ ಓದು ಬರಹದಷ್ಟೇ ಪ್ರಿಯವಾದುದು. ಆದರೆ ರಂಗಭೂಮಿ ಕುರಿತು ಕುತೂಹಲ ತಾಳಲು ಕಾರಣವಾದುದು ಕರ್ನಾಟಕ ಸಂಘ ದಲ್ಲಿ ರಂಗಗುರು ಮಾನ್ಯ ಸದಾನಂದ ಸುವರ್ಣರ ಮುಂದಾಳತ್ವದಲ್ಲಿ, ಸುರೇಶ ಆನಗಳ್ಳಿಯವರು ನಡೆಸಿಕೊಟ್ಟ ಒಂದು ತಿಂಗಳ ರಂಗಶಿಬಿರ. ಇದು ಸುಮಾರು ಮೂವತ್ತು ವರ್ಷಗಳ ಹಿಂದೆ. ನಾವು ಶಿಬಿರಾರ್ಥಿಗಳಿಂದ ಸಿರಿಸಂಪಿಗೆ ನಾಟಕ ಪ್ರದರ್ಶನ. ಮತ್ತೆ ಸುವರ್ಣ ಸರ್ ಮೂಲಕವೇ ಗೋರೆಗಾಂವ್ ಕರ್ನಾಟಕ ಸಂಘದಲ್ಲಿ ಮೂರು ತಿಂಗಳ ಶಿಬಿರದಲ್ಲಿ ಕಲಿಕೆಗೆ ಮತ್ತಷ್ಟು ಅವಕಾಶ. ಮುಂದೆ ಕೃಷ್ಣಮೂರ್ತಿ ಕವತ್ತಾರ್ ಅವರಿಂದ ಕಲಿಕೆ. ಹೀಗೆ ಚಿಗುರೊಡೆದ ರಂಗಾಸಕ್ತಿಯ ಹಿನ್ನೆಲೆಯಲ್ಲಿ ಅರಿತದ್ದು, ರಂಗಭೂಮಿಯ ಅಪಾರ ಸಾಧ್ಯತೆ ಮತ್ತು ತರಬೇತಿ ಶಿಬಿರದ ಮಹತ್ವ ಹಾಗೂ ಅವಶ್ಯಕತೆ.

ತದನಂತರವೂ ಮುಂಬೈಯಲ್ಲಿ ರಂಗತರಬೇತಿ ಶಿಬಿರಗಳು ಆಗಿವೆ.

ಮುಂಬೈ ಬೆಳೆದಂತೆಲ್ಲ ಸಾಕಷ್ಟು ಕರ್ನಾಟಕ ಮೂಲದವರು ಚದುರಿ ಮುಂಬೈ ಆಚೆಗಿನ ಜಿಲ್ಲಾ ಪರಿಸರಗಳಲ್ಲಿ ನೆಲೆಸಿ ಸಾಂಸ್ಕೃತಿ-ಕವಾಗಿ ಸಂಘಟಿತರಾಗತೊಡಗಿದರು. 'ಇವರನ್ನು ತಲುಪಲು ಅವರಲ್ಲಿಗೇ ಹೋಗಿ ರಂಗ ತರಬೇತಿ, ನಾಟಕ ಚಟುವಟಿಕೆಗಳನ್ನು ಆಯೋಜಿಸುವತ್ತ ಮುಂದಾಗಬೇಕು' ಎಂದು ಕಳೆದ ವರ್ಷ ನಮ್ಮ ಕನ್ನಡ ಕಲಾಕೇಂದ್ರಕ್ಕೆ 70 ತುಂಬಿದ ಸಂಭ್ರಮದಲ್ಲಿ ಹೊರತಂದ 'ಕನ್ನಡ ಕಲಾಂತರಂಗ' ಗ್ರಂಥದಲ್ಲಿ ಲೇಖನವೊಂದರಲ್ಲಿ ಬರೆದಿದ್ದೆ. ಆ ಮಾತನ್ನು ಕಾರ್ಯರೂಪಕ್ಕೆ ತರವಲ್ಲಿ ಕಲಾ ಕೇಂದ್ರದ ಈಗಿನ ಅಧ್ಯಕ್ಷರು, ಕಲಾವಿದರೂ ಆದಂತಹ ಮಧುಸೂಧನ ಟಿ.ಆರ್. ಅವರ ಮುತುವರ್ಜಿ ಮತ್ತು ಸಮಿತಿಯ ಸಹಕಾರ ಕಾರಣವಾಯಿತು. ಹೀಗೆ ಕಲಾ ಕೇಂದ್ರ ಮುಂಬೈಯಾಚೆಗಿನ ಉಪನಗರಗಳಲ್ಲಿ ಪ್ರಥಮ ಬಾರಿಗೆ ಆರಂಭಿಕ ರಂಗ ತರಬೇತಿ ಶಿಬಿರಕ್ಕೆ ನಾಂದಿ ಹಾಡಿತು.

**ಮೀರಾ ರೋಡ್ ಶಿಬಿರ :** ತುಳು ಕನ್ನಡ ವೆಲ್ಫೇರ್ ಸೊಸೈಟಿ (ರಿ) ಮತ್ತು ಕಲಾ ಭೂಮಿಕಾ ಸಂಸ್ಥೆಗಳ ಸಹಯೋಗದೊಂದಿಗೆ ತಾ. 27.12.2025 ರ ಮಧ್ಯಾಹ್ನ 4 ರಿಂದ ಸಂಜೆ 8 ರ ತನಕ ಮೀರಾ ರೋಡ್ ಪೂರ್ವದಲ್ಲಿರುವ ಹೋಟೆಲ್ ಸುರಭಿ ಸಭಾಗೃಹದಲ್ಲಿ ಆಯೋಜಿಸಲಾಗಿ-ತ್ತು. ಶಿಬಿರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಬೆಂಗಳೂರಿನಿಂದ ಪ್ರತಿಭಾವಂತ ರಂಗ ಕಲಾವಿದೆ, ನಾಟಕ, ಸಿನೆಮಾ ನಿರ್ದೇಶಕಿ ನಿರ್ಮಲಾ ನಾದನ್ ಆಗಮಿಸಿದ್ದರು. ಅಂದು ರಂಗ ಕಲಾವಿದೆ ಕೆ. ಪಂಕಜ (ಮರಿಯಮ್ಮನ ಹಳ್ಳಿ) ಸೊಗಸಾಗಿ ರಂಗಗೀತೆಗಳನ್ನು ಪ್ರಸ್ತುತ ಪಡಿಸಿದರು.

ಕಡಿಮೆ ಎಂದರೂ ಮೂರು ದಿನಗಳ ಸಮಯ ಬೇಡುವ ಶಿಬಿರವನ್ನು ಮೂರು ನಾಲ್ಕು ತಾಸುಗಳಲ್ಲಿ ಮಾಡಬೇಕಾದದು ., ಶಿಬಿರಾರ್ಥಿಗಳ ಪ್ರತಿಕ್ರಿಯೆ ಹೇಗೆ ..ಏನೋ ಎಂಬ ಆತಂಕದೊಂದಿಗೆ ಆರಂಭವಾದ ಶಿಬಿರವನ್ನು ಆತುರವಾಗಿಯೇ ಮುಗಿಸಿದರೂ, ಆ ಒಟ್ಟು ವಾತಾವರಣ ಮತ್ತು ಭಾಗವಹಿಸಿದವರ ಪ್ರತಿಕ್ರಿಯೆ ಕೇಳಿ ನಿರಾಳ ಎನಿಸಿದ್ದು ಹೌದು.



**ಆಯೋಜಕರ ಮಾತುಗಳಲ್ಲೇ ಹೇಳೋದಾದರೆ :**

" ಶಿಬಿರದಲ್ಲಿ ಆಸಕ್ತಿಯಿಂದ ಪಾಲ್ಗೊಂಡವರೆಲ್ಲರನ್ನು ನೋಡಿ ಅತ್ಯಂತ ಖುಷಿ ಆಗಿದೆ. ರಂಗಶಿಕ್ಷಕಿ ನಿರ್ಮಲಾ ನಾದನ್ ಅವರು ತುಂಬಾ ಉತ್ತಮ ರೀತಿಯಲ್ಲಿ ಅನೇಕ ಹೊಸಹೊಸ ವಿಷಯಗಳನ್ನು ಬಹಳ ಕಡಿಮೆ ಅವಧಿಯಲ್ಲಿ ತಿಳಿಸಿದ್ದಾರೆ. ಭಾಗವಹಿಸಿದ ಎಲ್ಲರಲ್ಲೂ ಇನ್ನೂ ತಿಳಿದುಕೊಳ್ಳಬೇಕೆಂಬ ಆಸೆ ವ್ಯಕ್ತವಾದುದು ಸಂತೋಷ ತಂದಿದೆ.

ಹರೀಶ್ ಸುವರ್ಣ ಕಣಂಜಾರು. ಅಧ್ಯಕ್ಷರು, ತುಳು ಕನ್ನಡ ವೆಲ್ಫೇರ್ ಎಸೋಸಿಯೇಷನ್, ಮೀರಾರೋಡ್.

" ವಿಭಿನ್ನ ರೀತಿಯ ಇಂತಹ ರಂಗ ತರಬೇತಿ ಶಿಬಿರದ ಅವಶ್ಯಕತೆ ಖಂಡಿತಾ ಇದೆ. ರಂಗಭೂಮಿಯಲ್ಲಿ ತೊಡಗಿಸಿಕೊಳ್ಳುವವರಿಗೆ ಅದರಲ್ಲೂ ಮಕ್ಕಳು ಈ ತರಹದ ತರಬೇತಿಯಿಂದಾಗಿ ಉತ್ತಮ ಕಲಾವಿದರಾಗಿ ರೂಪುಗೊಳ್ಳಲು ಸಾಧ್ಯ."

ಜಿ. ಕೆ.ಕೆಂಚನಕೆರೆ, ಸಂಸ್ಥಾಪಕರು,ಕಲಾವಿದರು ಕಲಾ ಭೂಮಿಕಾ ತಂಡ. ಶಿಬಿರದಲ್ಲಿ ಕು. ಸಂಜನಾ, ಶಿಲ್ಪಾ ಪೂಜಾರಿ, ಕು.ಮನ್ವಿತಾ, ಮತ್ತು ಆಶಲತಾ ಪಿ.ಶೆಟ್ಟಿ ಶಿಬಿರದ ಪ್ರತಿಭಾನ್ವಿತರೆಂದು ಆಯ್ಕೆಯಾಗಿ ಗೌರವಿಸಲಾಯಿತು. ಮೀರಾರೋಡ್ ಶಿಬಿರದ ಆಯೋಜನೆಗೆ ಶ್ರಮಪಟ್ಟವರಲ್ಲಿ ಎ. ಕೆ. ಹರೀಶ್ ಮತ್ತು ಲೇಖಕ ಅಶೋಕ ವಳದೂರು ಇವರ ಕೊಡುಗೆ ನೆನೆಯಲೇ ಬೇಕು.

**ನಲಾಸೋಪಾರದಲ್ಲಿ ಶಿಬಿರ :**

ತಾ.28–12–25 ರಂದು ಬಂಟರ ಸಂಘ ಮುಂಬಯಿ; ವಸಾಯಿ-ಡಹಾಣು ಪ್ರಾದೇಶಿಕ ಸಮಿತಿ ಮತ್ತು ತುಳು ಕೂಟ ಫೌಂಡೇಶನ್ (ರಿ) ನಲಾಸೋಪಾರ ಇವರ ಸಹಯೋಗದೊಂದಿಗೆ ಆದಿತ್ಯವಾರ ಬೆಳಿಗ್ಗೆ 11 ರಿಂದ ಸಂಜೆ 6 ರ ತನಕ ರಿಜೆನ್ಸಿ ಬ್ಯಾಂಕ್ವೆಟ್ ಹಾಲ್, ನಲಾಸೋಪಾರ ಪೂರ್ವ ದಲ್ಲಿ ಹಮ್ಮಿಕೊಳ್ಳಲಾಗಿತ್ತು.

" ಶಿಬಿರಾರ್ಥಿಗಳು ಅದರಲ್ಲೂ ಮಕ್ಕಳು ಇಷ್ಟೊಂದು ಉತ್ಸಾಹದಿಂದ ಪಾಲುಗೊಂಡಿದ್ದು ಮತ್ತು ಅವರ ಪ್ರತಿಭೆ ನೋಡಿ ಸಂತೋಷವಾಗುತ್ತದೆ. ಪ್ರತಿಭಾವಂತ ಮಕ್ಕಳು, ಕಲಾವಿದರಿಗೆ ಪ್ರೋತ್ಸಾಹ ನೀಡಲು ನಾವು ಸದಾ ಸಿದ್ಧರಿದ್ದೇವೆ. ನಿರ್ಮಲಾ ನಾದನ್ ಅವರು ಕಡಿಮೆ ಸಮಯದಲ್ಲಿ ಹೆಚ್ಚು ವಿಷಯಗಳನ್ನು ಅರ್ಥವಾಗುವಂತೆ ಕಲಿಸುವ ಶ್ರಮ ತಗೊಂಡಿದ್ದಾರೆ. " ಎಂದು ಹೇಳಿದ ತುಳು ಕೂಟ ಫೌಂಡೇಶನ್ , ನಲಾಸೋಪಾರದ ಜನಪ್ರಿಯ ಅಧ್ಯಕ್ಷರಾದ ಶಶೀಧರ್ ಕೆ ಶೆಟ್ಟಿ, ಇನ್ನಂಜೆ ಅವರ ಅಭಿಪ್ರಾಯ ಕೇಳಿ ಮನಸ್ಸು ಹಗೂರವಾಗಿತ್ತು.

"ಬಹಳ ಕಡಿಮೆ ಅವದಿಯಲ್ಲಿ ಈ ಶಿಬಿರದ ಆಯೋಜನೆ ಮಾಡಲಾಗಿದೆ. ಇಂತಹ ರಂಗ ತರಬೇತಿ ಕೇವಲ ಮಕ್ಕಳಿಗಲ್ಲ, ದೊಡ್ಡವರಿಗೂ ಪ್ರಯೋಜನಕ್ಕೆ ಬರುತ್ತದೆ. ಎಲ್ಲರೂ ತುಂಬಾ ಉತ್ಸಾಹದಿಂದ ಭಾಗವಹಿಸಿದ್ದಾರೆ . ಸಮಯದ ಅಭಾವ ಇದ್ದರೂ ನಿರ್ಮಲಾ ನಾದನ್ ಅವರು ಚೆನ್ನಾಗಿ ಶಿಬಿರವನ್ನು ನಡೆಸಿಕೊಟ್ಟಿದ್ದಾರೆ. " ಇದು ಬಂಟರ ಸಂಘ ಮುಂಬಯಿ; ವಸಾಯಿ-ಡಹಾಣು ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರಾದ ಮಂಜುನಾಥ ಎನ್ ಶೆಟ್ಟಿ, ಕೊಡ್ಲಾಡಿ ಅವರ ಮನದ ಮಾತುಗಳು.

" ಕಳೆದ ವರ್ಷದಿಂದಲೇ ಈ ಶಿಬಿರದ ಕುರಿತು ಬಾಲ್ಯ ಸ್ನೇಹಿತ ಗೋಪಾಲ ತ್ರಾಸಿ ಹೇಳಿದಾಗ, ನಮ್ಮವರ ಪ್ರತಿಕ್ರಿಯೆ ಹೇಗಿರಬಹುದು..! ಹೇಗೆ ಆಗುತ್ತದೋ ..ಏನೋ..! ಎಂಬ ಸಂದೇಹ ಇತ್ತು. ಆದರೆ ಇಂದು ಸೇರಿದ ಮಕ್ಕಳ ಮತ್ತು ದೊಡ್ಡವರ ಕ್ರಿಯಾಶೀಲ ಚಟುವಟಿಕೆಗಳನ್ನು ಗಮನಿಸಿದಾಗ, ಅವರು ಖುಷಿಖುಷಿಯಲ್ಲಿ ಪ್ರತಿಕ್ರಿಯಿಸುವುದನ್ನು ಕಂಡಾಗ ಶಿಬಿರದ ಆಯೋಜನೆ ಸಾರ್ಥಕ ಭಾವ ತಂದಿದೆ. " ಎಂದು ನನ್ನ ಬಾಲ್ಯಕಾಲದ ಗೆಳೆಯ, ಎರಡೂ ಸಂಸ್ಥೆಗಳ ಕಾರ್ಯದರ್ಶಿ, ಸಂಘಟಕರಾದ ಜಗನ್ನಾಥ ಡಿ. ಶೆಟ್ಟಿ ಪಳ್ಳಿ ಯವರ ಮಾತುಗಳು ಕೃತಜ್ಞತಾ ಭಾವ ಮೂಡಿಸಿದವು. ಪ್ರತಿಭಾವಂತ ಶಿಬಿರಾರ್ಥಿಗಳಾಗಿ ವರ್ಷಾ ಶೆಟ್ಟಿ, ಶೈಶಾ ಶೆಟ್ಟಿ, ದಿಶಾ ಹೆಗ್ಡೆ, ಮೋಕ್ಷ ಮಡಿವಾಳ ಮತ್ತು ಪುಟಾಣಿ ತನಿಷ್ ಶೆಟ್ಟಿ ಆಯ್ಕೆಯಾಗಿ ಬಹುಮಾನ ನೀಡಲಾಯಿತು.

"ಈ ಅಲ್ಪಕಾಲೀನ ತರಬೇತಿ ಶಿಬಿರ ಆರಂಭದ ಹೆಜ್ಜೆಯಷ್ಟೆ . ಶಿಬಿರಾರ್ಥಿಗಳ ಪ್ರತಿಕ್ರಿಯೆ ನಮ್ಮ ನಿರೀಕ್ಷೆಗೂ ಮೀರಿದ್ದಾಗಿದೆ. ಮುಂದೆ ಇದೇ ಶಿಬಿರಾರ್ಥಿಗಳಿಂದ ನಾಟಕ ಮಾಡಿಸೋದು ನಮ್ಮ ಉದ್ದೇಶ. ಕಲಾ ಕೇಂದ್ರದ ನಾಟಕೋತ್ಸವದಲ್ಲಿ ನಿಮ್ಮ ತಂಡದ ನಾಟಕಗಳು ಬರಬೇಕು, ಅದಕ್ಕೆ ಕಲಾ ಕೇಂದ್ರದ ಸಹಕಾರ ಇದೆ ಮತ್ತು ಕರ್ನಾಟಕ ನಾಟಕ ಅಕಾಡೆಮಿಯವರ ನೆರವು, ಸಹಕಾರಕ್ಕೂ ಪ್ರಯತ್ನಿಸೋಣ." ನಮ್ಮ ಕನ್ನಡ ಕಲಾ ಕೇಂದ್ರದ ಅಧ್ಯಕ್ಷರಾಧ ಮಧುಸೂಧನ ಟಿ.ಆರ್. ಅವರ ನುಡಿ ಮಾತುಗಳು.

**ಸಂಪನ್ಮೂಲ ವ್ಯಕ್ತಿ ನಿರ್ಮಲಾ ನಾದನ್ :** " ಆರಂಭದಲ್ಲಿ ನನಗೆ ಭಾಷೆ ಮತ್ತು ಮಕ್ಕಳ ಮುಗ್ಧತೆಯ ವಿಷಯದಲ್ಲಿ ಆತಂಕವಿತ್ತು. ಆದರೆ ರಂಗದ ಒಂದಷ್ಟು ಆಟಗಳು ಹಿರಿಯರಿಂದ ಹಿಡಿದು ಕಿರಿಯರವರೆಗೂ ಅವರೊಳಗಿನ ನಾಚಿಕೆಯ ಸ್ವಭಾವವನ್ನು ಹೋಗಲಾಡಿಸಿ, ಹಿರಿಯರನ್ನು ಸಡ್ಡು ಹೊಡೆದು ಮಕ್ಕಳು ಅಭಿನಯದ ಕಲಿಕೆಯಲ್ಲಿ ತಲ್ಲೀನರಾದರು. ಸಂಕೋಚ ಸರಿಸಿ ಸಂಗೀತ, ನೃತ್ಯ, ಅಭಿನಯವನ್ನು ಎಲ್ಲರ ಮುಂದೆ ಪ್ರದರ್ಶಿಸಲು ರಂಗದ ಆಟಗಳು ನೆರವಾದವು. ಹುಡುಗಿಯರು ಒಬ್ಬ-ರಿಗಿಂತ ಮತ್ತೊಬ್ಬರು ಕ್ರಿಯೆ ಮತ್ತು ಪ್ರತಿಕ್ರಿಯೆ ನೀಡುವುದರ ಮುಖಾಂತರ ತಮ್ಮ ಕಲಾ ಚಾತುರ್ಯವನ್ನು ಪ್ರದರ್ಶಿಸಿದರು. ಕೆಲವರು ಉತ್ತಮ ನಿರೂಪಕರಾಗಿ, ಇನ್ನೂ ಕೆಲವರು ಉತ್ತಮ ಬರಹಗಾರರಾಗಿ ಚಿಕ್ಕ ಚಿಕ್ಕ ದೃಶ್ಯಗಳನ್ನು ನಿರ್ದೇಶಿಸುವ ತಮ್ಮ ಕಲಾ ಪ್ರತಿಭೆಯನ್ನು ತೋರಿಸುವಲ್ಲಿ ಮುಂದಾಗಿದ್ದು ಸಂತೋಷದ ವಿಚಾರ. ಆದರೆ ಅಲ್ಪ ಕಾಲಾವಧಿಯಲ್ಲಿ ನಟನೆಯನ್ನು ಹೊರ ತರುವುದು ಸುಲಭ ಸಾಧ್ಯವಲ್ಲ. ಅದಕ್ಕೆ ವೃತ್ತಿಪರ ಕಲಿಕೆ ನಿರಂತರ ಬೇಕಾಗುತ್ತದೆ " ಎಂಬ ಅಭಿಪ್ರಾಯ ಪಟ್ಟರು.

ನಿರ್ಮಲಾ ನಾದನ್ ಅವರ ಆತ್ಮೀಯ ಕಲಿಸುವ ಶೈಲಿಗೆ ಮಕ್ಕಳು ಅದೆಷ್ಟು ಆಕರ್ಷಿತರಾದರೆಂದರೆ , " ಮೇಡಮ್ ನೀವು ಮತ್ತೊಮ್ಮೆ ಬಂದು ಹೆಚ್ಚು ಸಮಯ ಕ್ಲಾಸ್ ಮಾಡಿ, ನಾಟಕ ಸಹ ಮಾಡಿಸಿ " ಅಂತಂದು ಬೀಳ್ಕೊಟ್ಟದ್ದು ಸಾರ್ಥಕ ಭಾವ. ಕಲಾ ಕೇಂದ್ರದ ವತಿಯಿಂದ ಕಲಾವಿದ ಜಗದೀಶ್ ರೈ, ನಾಟಕಕಾರ ಸಾ.ದಯಾ, ಸಹಕಾರ ಹಿತೈಷಿಗಳಾದ ಬಾಲಚಂದ್ರ ದೇವಾಡಿಗ, ಅಜಿತ್ ಶೆಟ್ಟಿಯವರ ನೆರವು ಮಹತ್ವದ್ದು.

ಇಂತಹದ್ದು ನಿರಂತರ ನಡೆಯುತ್ತಿರಬೇಕಾದುದು. ಎರಡೂ ಶಿಬಿರವನ್ನು ಪರಿಕಲ್ಪಿಸಿ, ಆಯೋಜನೆ, ಸಂಯೋಜಿಸುವಲ್ಲಿ ಒಂದಷ್ಟು ಶ್ರಮ, ಸಮಯದ ವ್ಯಯ, ಆರೋಗ್ಯ ಏರುಪೇರಾದರೂ ಒಂದಷ್ಟು ಸಜ್ಜನ ಮನಸ್ಸುಗಳೊಂದಿಗೆ, ಪ್ರತಿಭಾವಂತ ಮಕ್ಕಳೊಂದಿಗೆ ಬೆರೆತ ಖುಷಿ ಇದೆ. ಶಿಬಿರಾರ್ಥಿಗಳಿಂದಲೇ ನಾಟಕ ಸಾದರ ಪಡಿಸಬೇಕು. ಇದು ಎರಡೂ ಕಡೆಯಲ್ಲಿ ಆಯೋಜಕರ, ಶಿಬಿರಾರ್ಥಿಗಳ ಅಪೇಕ್ಷೆ, ಕಾದು ನೋಡೋಣ. ಈ ಯೋಚನೆ, ಯೋಜನೆಗೆ ಕೈ ಜೋಡಿಸಿದ ಎಲ್ಲರಿಗೂ ಹೃನ್ಮನದ ನಮನಗಳು.

–ಗೋಪಾಲ ತ್ರಾಸಿ

# ಮೊದಲನೇ ಪುಟದಿಂದ

## ಶಿಸ್ತು ಇಲ್ಲ: ಲೋಕಾಯುಕ್ತರ ಕಾರ್ಯದರ್ಶಿ ಅಸಮಾಧಾನ

ಜನವರಿ 2 ರಿಂದ ಜನವರಿ 7ರವರೆಗೆ ರಾಯಚೂರು ಜಿಲ್ಲೆಯ ವಿವಿಧೆಡೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ ವೇಳೆ ಕಂಡುಬಂದ ಲೋಪಗಳಿಗೆ ಸಂಬಂಧಿಸಿದಂತೆ ಪೊಲೀಸ್ ಹಾಗೂ ನ್ಯಾಯಾಂಗ ಇಲಾಖೆಯ ಅಧಿಕಾರಿಗಳಿಂದ ವರದಿ ಪಡೆದು ತಪ್ಪಿತಸ್ಥರ ಮೇಲೆ ವಿಚಾರಣೆಗೆ ಕ್ರಮವಹಿಸಲಾಗುವುದು. ಗಂಭೀರ ಪ್ರಕರಣ ಎಂದು ಕಂಡುಬಂದಲ್ಲಿ ತಪ್ಪಿತಸ್ಥ ಅಧಿಕಾರಿಗಳು ಮತ್ತು ಸಿಬ್ಬಂದಿ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು. ಈಗ ಆಗಿರುವ ಲೋಪಗಳಿಗೆ ಸಂಬಂಧಿಸಿದಂತೆ ಯಾರಾದರು ಅಧಿಕಾರಿಗಳು ಮತ್ತು ಸಿಬ್ಬಂದಿ ತಪ್ಪು ಮಾಹಿತಿ ನೀಡಿದಲ್ಲಿ ಮತ್ತೆ ಜಿಲ್ಲಾ ಲೋಕಾಯುಕ್ತ ಅಧೀಕ್ಷಕರಿಂದ ಪರಿಶೀಲಿಸಿ ವರದಿ ಪಡೆದು ದೂರು ದಾಖಲಿಸುತ್ತೇವೆ ಎಂದು ತಿಳಿಸಿದರು.

ಸೂಕ್ತ ಮಾರ್ಗದರ್ಶನಕ್ಕೆ ವರದಿ: ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದಕ್ಕಾಗಿ, ಲೋಕಾ ತಂಡ ಭೇಟಿ ನೀಡಿ ಪರಿಶೀಲಿಸಿ ಪಟ್ಟಿ ಮಾಡಿದ ಲೋಪದೋಷಗಳ ಅಂಶಗಳ ಸಮಗ್ರ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗುವುದು ಎಂದು ಕಾರ್ಯದರ್ಶಿಗಳು ತಿಳಿಸಿದರು.

ನಮ್ಮ ಹಂತದಲ್ಲೇ ಕ್ರಮ: ಬೇರೆ ಬೇರೆ ಇಲಾಖೆಗಳಲ್ಲಿನ ಲೋಪದ ಬಗ್ಗೆ ಲೋಕಾಯುಕ್ತರು ನೀಡಿದ ಪಟ್ಟಿಯ ಮೇಲೆ ತಾವು ತಮ್ಮ ಹಂತದಲ್ಲಿ ಆಗುವುದನ್ನು ತ್ವರಿತವಾಗಿ ಸರಿಪಡಿಸುವುದಾಗಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ತಿಳಿಸಿದರು. ಶುದ್ಧ ಕುಡಿವ ನೀರಿನ ಘಟಕಗಳ ದುರಸ್ಥಿಗೆ ಹೆಚ್ಚಿನ ಒತ್ತು ಕೊಡುವುದಾಗಿ ಅವರು ಹೇಳಿದರು. ಮುಂದಿನ ವಾರ ಎಲ್ಲ ಅಧಿಕಾರಿಗಳ ಸಭೆ ಕರೆದು ಪುನಃ ಚರ್ಚಿಸುವುದಾಗಿ ತಿಳಿಸಿದರು.

ಇಲ್ಲಿಗೆ ಮುಗಿಯುವುದಿಲ್ಲ: ಲೋಕಾಯುಕ್ತ ಭೇಟಿಯ ಬಿಸಿ ಇಲ್ಲಿಗೆ ಮುಗಿಯುವುದಿಲ್ಲ. ತಪ್ಪಿತಸ್ಥರಿಗೆ ಇನ್ಮುಂದೆ ನೊಟೀಸ್ ಬರುತ್ತವೆ. ಅಧಿಕಾ-ರಿಗಳು ನೊಟೀಸಗಳನ್ನು ಹಗುರವಾಗಿ ಪರಿಗಣಿಸದೇ ಕೂಡಲೇ ಉತ್ತರ ನೀಡಬೇಕು. ಪ್ರಕರಣ ಗಂಭೀರ ಸ್ವರೂಪ ಹೊಂದಿದ್ದಲ್ಲಿ ಕ್ರಿಮಿನಲ್ ಪ್ರಕರಣ ಎದುರಿಸಬೇಕು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಎ.ವಿ.ಪಾಟೀಲ, ರಾಯಚೂರು ಜಿಲ್ಲಾ ಕರ್ನಾಟಕ ಲೋಕಾಯುಕ್ತದ ಅಧೀಕ್ಷಕರಾದ ಸತೀಶ್ ಎಸ್ ಚಿಟಗುಬ್ಬಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾ-ರಿಗಳಾದ ಅರುಣಾಂಕ್ಷು ಗಿರಿ, ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಲೋಕಾಯುಕ್ತದ ಡಿವೈಎಸ್ಪಿ ರವಿ ಪುರುಷೋತ್ತಮ ಹಾಗೂ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಸ್ವಾಗತಿಸಿದರು.

## ಲೋಕಾಯುಕ್ತರ ಕಾರ್ಯದರ್ಶಿ ಶ್ರೀನಾಥ ಕೆ ಕಳವಳ

**ಕೆರೆಗಳ ಸುರಕ್ಷತೆಗೆ ಒತ್ತು:** ಕೆರೆ ಒತ್ತುವರಿ ಹಿನ್ನೆಲೆಯಲ್ಲಿ 2018ರಲ್ಲೇ ಲೋಕಾಯುಕ್ತದಿಂದ ರಾಜ್ಯದ ಎಲ್ಲ ಕಡೆಗೆ ಕೇಸ್ ದಾಖಲಿಸಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಒಟ್ಟು 587 ಕೆರೆಗಳಿದ್ದು, ಜನರ ಜೀವನಾಡಿಯಾದ ಈ ಕೆರೆಗಳ ಸುರಕ್ಷತೆಗೆ ಒತ್ತು ಕೊಡಬೇಕು. ಜಿಲ್ಲೆಯಲ್ಲಿ 46 ಕೆರೆಗಳ ಒತ್ತುವರಿ ತಡೆದಿದ್ದೇವೆ ಎಂದು ಅಧಿಕಾರಿಗಳು ವರದಿ ನೀಡಿದ್ದಾರೆ. 319 ಕೆರೆಗಳ ಸರ್ವೆ ನಡೆಸಿದ ಬಗ್ಗೆ ನಕ್ಷೆ ನೀಡಬೇಕು ಎಂದು ಎಡಿಎಲ್ಆರ್ ಅವರಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

**155 ಘಟಕ ನಿಷ್ಕ್ರಿಯ; ಅಸಮಾಧಾನ:** ಅರಕೇರಾದಲ್ಲಿ 72, ದೇವದುರ್ಗದಲ್ಲಿ 72, ಲಿಂಗಸಗೂರುದಲ್ಲಿ 114, ಮಸ್ಕಿಯಲ್ಲಿ 66, ರಾಯಚೂರುದಲ್ಲಿ 107, ಸಿಂಧನೂರನಲ್ಲಿ 116 ಮತ್ತು ಸಿರವಾರದಲ್ಲಿ 57 ಸೇರಿ ಜಿಲ್ಲೆಯಲ್ಲಿ ಒಟ್ಟು 716 ಶುದ್ಧ ಕುಡಿವ ನೀರಿನ ಘಟಕಗಳ ಪೈಕಿ 561 ಘಟಕಗಳು ಮಾತ್ರ ಸುಸ್ಥಿತಿಯಲ್ಲಿವೆ. 155 ಘಟಕಗಳು ನಿಷ್ಕ್ರಿಯವಾಗಿದ್ದು, ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ವರದಿ ನೀಡಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

**ನಾಯಿಗಳ ಹಾವಳಿ ತಡೆಗೆ ಕ್ರಮವಹಿಸಿ:** ಸಾರ್ವಜನಿಕ ಸ್ಥಳಗಳಲ್ಲಿ ಬೀದಿನಾಯಿಗಳ ಹಾವಳಿ ನಿಯಂತ್ರಿಸಲೇಬೇಕು ಎಂದು ಸುಪ್ರೀಂ ಕೋರ್ಟ್ ಕಟ್ಟುನಿಟ್ಟಿನ ಸೂಚನೆ ನೀಡಿದಾಗ್ಯೂ ರಾಯಚೂರು ನಗರ ಸೇರಿದಂತೆ ಸಿಂಧನೂರ, ಮಾನವಿ, ಲಿಂಗಸೂರು, ದೇವದುರ್ಗ, ಮಸ್ಕಿ, ಸಿರವಾರ, ಅರಕೇರಾ ಯಾವುದೆ ಕಡೆಗಳಲ್ಲಿ ಏನೂ ಕ್ರಮಗಳಾಗದೇ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಅಧಿಕಾರಿಗಳು ಸುಮ್ಮನಿದ್ದು, ಈ ಬಗ್ಗೆ ಕೂಡಲೇ ಕ್ರಮ ಜರುಗಿಸಿ ವಿವರವಾದ ವರದಿ ನೀಡವೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

**ಬಯಲುಶೌಚ ಮುಕ್ತ ಜಿಲ್ಲೆಯಾಗಲಿ:** ಈಗಲು ರೋಡ್ ಪಕ್ಕ ಕುಳಿತು ಬಯಲು ಶೌಚ ಮಾಡುವ ಪರಿಸ್ಥಿತಿ ರಾಯಚೂರು ಸೇರಿದಂತೆ ಈ ಭಾಗದ ಜಿಲ್ಲೆಗಳಲ್ಲಿ ಕಾಣುತ್ತಿದೆ. ರಾಯಚೂರು ಜಿಲ್ಲೆಯಲ್ಲಿ ಶೌಚಾಲಯ ಪರಿಸ್ಥಿತಿಯ ಚಿತ್ರಣ ಸಿಕ್ಕಿಲ್ಲ. ಸಿಇಓ ಅವರಿಂದ ಮಾಹಿತಿ ಪಡೆದು ಪರಿಶೀಲಿಸುತ್ತೇವೆ ಎಂದು ಅವರು ತಿಳಿಸಿದರು.

**ಚೆಕ್‌ಪೋಸ್ಟಗಳ ಮೇಲೆ ನಿಗಾ:** ಬೀದರ ಜಿಲ್ಲೆಯ ಹುಮನಾಬಾದ್ ಬಳಿಯ ಚೆಕ್‌ಪೋಸ್ಟ್ ಮೂಲಕ ಸಂಚರಿಸುವ ವಾಹನಗಳ ಚಾಲಕ-ರಿಂದ ಕೆಲವು ಆರ್‌ಟಿಓ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಡಹಗಲೇ ಅನಧೀಕೃತವಾಗಿ ಹಣ ವಸೂಲಿ ಮಾಡುವ ಕೃತ್ಯವನ್ನು ನಮ್ಮ ಲೋಕಾ ತಂಡವು ಬೇಧಿಸಿದೆ. ಈ ಬಗ್ಗೆ ಎಫ್‌ಐಆರ್ ದಾಖಲಿಸಿದೆ. ಈ ಜಾಲ ಎಲ್ಲಾ ಕಡೆ ಇರಬಹುದು ಎಂದು ಯೋಚಿಸಿ ರಾಯಚೂರು ಚೆಕ್ ಪೋಸ್ಟಗಳ ಮೇಲೆ ನಿಗಾ ಇಡಲಾಗುವುದು ಎಂದು ಶ್ರೀನಾಥ ಕೆ ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಲೋಕಾಯುಕ್ತದ ಅಧೀಕ್ಷಕರಾದ ಸತೀಶ್ ಎಸ್ ಚಿಟಗುಬ್ಬಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾ-ರಿಗಳಾದ ಅರುಣಾಂಕ್ಷು ಗಿರಿ, ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಹಾಗೂ ಇನ್ನೀತರರು ಇದ್ದರು.

## ಎಡ ಪಕ್ಷಗಳ – ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ

\ಉಕ್ರೇನ್ ಎತ್ತಿಗಟ್ಟಿ ರಷ್ಯಾದ ಮೇಲೆ ಪರೋಕ್ಷ ದಾಳಿ ನಡೆಸುತ್ತಿರುವುದು ಈಗಾಗಲೇ ಜಗಜ್ಜಾಹೀರಾಗಿದೆ. ಅಷ್ಟೇ ಅಲ್ಲದೇ ನೈಸರ್ಗಿಕ ಸಂಪದ್ಭರಿತ ರಾಷ್ಟ್ರಗಳನ್ನು ಗುರಿಯಾಗಿಸಿಕೊಂಡು ಅಲ್ಲಿನ ಸೌರ್ವಭೌಮತ್ವ ಕಿತ್ತೊಗೆಯಲು ಮಿಲಿಟರಿ ದಾಳಿ ನಡೆಸುತ್ತಿರುವ ಅಮೆರಿಕಾ ಮತ್ತು ಅದರ ನೀತಿಗಳು ಇಡೀ ವಿಶ್ವಕ್ಕೆ ಗಂಡಾಂತರಕಾರಿಯಾಗಿದ್ದು, ವೆನೆಜುವೆಲಾದ ಮೇಲಿನ ದಾಳಿಯ ನಿಜವಾದ ಉದ್ದೇಶ ಅಲ್ಲಿನ ಜನರ ರಾಷ್ಟ್ರೀಯ ಸಾರ್ವಭೌಮತ್ವ, ರಾಜಕೀಯ ಸ್ವಾತಂತ್ರ್ಯ ಮತ್ತು ತಮ್ಮದೇ ಆದ ಅಭಿವೃದ್ಧಿಯ ಮಾರ್ಗವನ್ನು ಆಯ್ಕೆ ಮಾಡುವ ಹಕ್ಕನ್ನು ಕಿತ್ತುಕೊಂಡು, ಅಲ್ಲಿನ ತೈಲ, ಖನಿಜ ಸಂಪನ್ಮೂಲಗಳನ್ನು ವಶಪಡಿಸಿಕೊಳ್ಳುವುದು. ಪ್ರತಿಗಾಮಿ ಶಕ್ತಿಗಳೊಂದಿಗೆ ಮೈತ್ರಿ ಮಾಡಿಕೊಂಡು ಬಲವಂತದ ಆಡಳಿತ ಹೇರುವುದಾಗಿದೆ ಎಂದು ಪ್ರತಿಭಟನಾ ನಿರತರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ ಪಕ್ಷದ ಬಾಷುಮಿಯಾ, ಡಿ.ಎಚ್.ಕಂಬಳಿ, ಸಿಪಿಐ(ಎಂ)ನ ಬಸವಂತರಾಯಗೌಡ ಕಲ್ಲೂರು, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಚಂದ್ರಶೇಖರ ಗೊರಬಾಳ, ಸಿಪಿಐ(ಎಂಎಲ್) ಲಿಬರೇಶನ್‌ನ ನಾಗರಾಜ ಪೂಜಾರ್, ಜಮಾಅತೆ ಇಸ್ಲಾಮಿ ಹಿಂದ್‌ನ ಹುಸೇಬ್‌ಸಾಬ್, ಮನುಜಮತ ಬಳಗದ ಬಸವರಾಜ ಬಾದರ್ಲಿ, ಬಾಬರ್‌ಪಾಷಾ ವಕೀಲರು, ಜಿಲಾನಿಸಾಬ್, ಬಸವರಾಜ ಬೆಳಗುರ್ಕಿ, ಎಂ.ಗೋಪಾಲಕೃಷ್ಣ, ಶರಣಬಣ್ಣ ನಾಗಲಾಪುರ, ಕಂಠೆಪ್ಪ, ಸಿಪಿಐ(ಎಂಎಲ್) ಮಾಸ್‌ಲೈನ್‌ನ, ಬಿ.ಎನ್. ಯರದಿಹಾಳ, ಮಂಜುನಾಥ ಗಾಂಧಿನಗರ, ಶಂಕರ ಗುರಿಕಾರ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ಶಕುಂತಲಾ ಪಾಟೀಲ್, ಮಹಿಳಾ ಒಕ್ಕೂಟದ ವಿರುಪಮ್ಮ ಉದ್ಬಾಳ.ಜೆ ಹಾಗೂ ಇತರರು ಇದ್ದರು.

### ಲೋಪಗಳ ಪರಿಶೀಲಿಸಿ ವರದಿ ನೀಡಲು ಜಿಲ್ಲಾಮಟ್ಟದ ಅಧಿಕಾರಿಗಳಿಗ ಸೂಚನೆ

# 61 ಕಡೆಗಳಲ್ಲಿ ಅನಿರೀಕ್ಷಿತ ಭೇಟಿ ನೀಡಿದ ಲೋಕಾದಾಳಿ ವರದಿ ಬಿಚ್ಚಿಟ್ಟ ಅಧಿಕಾರಿಗಳು

ಜನವಾದಿ ವಾರ್ತೆ

ರಾಯಚೂರು ಜ 07 – ಕರ್ನಾಟಕ ಲೋಕಾಯುಕ್ತರಾದ ಗೌರವಾನ್ವಿತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರ ನಿರ್ದೇಶನದ ಮೇರೆಗೆ ಲೋಕಾಯುಕ್ತ ಅಧಿಕಾರಿಗಳ ತಂಡವು ರಾಯಚೂರು ಜಿಲ್ಲೆಯ 14 ವಸತಿ ನಿಲಯಗಳು ಸೇರಿದಂತೆ ವಿವಿಧ 61 ಕಡೆಗೆ ಭೇಟಿ ನೀಡಿ ಪರಿಶೀಲಿಸಿದ ವೇಳೆ ಕಂಡು ಬಂದ ಲೋಪಗಳ ಬಗ್ಗೆ ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರ ಕಾರ್ಯದರ್ಶಿಗಳಾದ ಶ್ರೀನಾಥ ಕೆ ಹಾಗೂ ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಗೌರವಾನ್ವಿತ ಎ.ವಿ.ಪಾಟೀಲ ಅವರು ಜಿಲ್ಲಾಮಟ್ಟದ ಅಧಿಕಾರಿಗಳ ಗಮನಕ್ಕೆ ತಂದರು.



ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನವರಿ 7ರಂದು ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಗೌರವಾನ್ವಿತ ಎ.ವಿ.ಪಾಟೀಲ ಅವರು, ರಾಯಚೂರು ನಗರ ಸೇರಿದಂತೆ ವಿವಿಧ ತಾಲೂಕುಗಳಲ್ಲಿನ 61 ಕಚೇರಿಗಳಿಗೆ ತಂಡವು ಭೇಟಿ ನೀಡಿ ಕಡತ ಪರಿಶೀಲನೆ ಮಾಡಿ ಲೋಪಗಳನ್ನು ಪಟ್ಟಿ ಮಾಡಲಾಗಿದೆ ಎಂದು ತಿಳಿಸಿದರು.

61 ಕಡೆಗಳಲ್ಲಿ ಭೇಟಿ ನೀಡಿದ ಬಗ್ಗೆ ಕಾರ್ಯದರ್ಶಿಗಳು ಹಾಗೂ ಅಪರ ನಿಬಂಧಕರು ಮಾತನಾಡಿ, ತಂಡವು ಮೊದಲಿಗೆ ಮಹಾನಗರ ಪಾಲಿಕೆಗೆ ಭೇಟಿ ನೀಡಿದಾಗ, ಅನಧೀಕೃತ ಕಟ್ಟಡಗಳಿಗೆ ಬಗ್ಗೆ ಯಾವುದೇ ರೀತಿಯ ರಿಜಿಸ್ಟರ್ ಇರಲಿಲ್ಲ. ತನಿಖೆಗೆ ಬೇಕಾದ ಮಾಹಿತಿ ಒದಗಿಸಲು ಕೆಲವರು ವಿಫಲರಾದರು. 69 ಕಸ ವಿಲೇವಾರಿ ವಾಹನಗಳ ಲಾಗ್ ಬುಕ್ ನಿರ್ವಹಣೆ ಮಾಡಿರಲಿಲ್ಲ. ಲಿಂಗಸೂರ ಪುರಸಭೆಯಲ್ಲಿ ಅವ್ಯವಸ್ಥೆ ಕಾಣಸಿತು. ದೇವದುರ್ಗ ಪುರಸಭೆಯ ವಾಹನಗಳ ಲಾಗ್ ಬುಕ್ ಸರಿ ಇರಲಿಲ್ಲ. ಕಸ ವಿಲೇವಾರಿ ವ್ಯವಸ್ಥೆ ಅಸಮರ್ಪಕವಾಗಿದ್ದು ಕಂಡು ಬಂದಿತು. ಸಿಂಧನೂರ ನಗರಸಭೆಯಲ್ಲಿ ಘನತ್ಯಾಜ್ಯದ ಖರ್ಚು ವೆಚ್ಚ ನಿರ್ವಹಣೆ ಸರಿಯಾಗಿರಲಿಲ್ಲ. ರಾಮದುರ್ಗ ಗ್ರಾಪಂಗೆ ಹಂಚಿಕೆಯಾದ ಕಸ ವಿಲೆವಾರಿ ವಾಹನದ ಕಡತ ಸಮರ್ಪಕವಾಗಿರಲಿಲ್ಲ ಎಂದು ತಿಳಿಸಿದರು.

ದೇವದುರ್ಗ ತಹಸೀಲ್ ಕಚೇರಿಯಲ್ಲಿ ಬಯೋಮೆಟ್ರಿಕ್ ಇದ್ದರೂ ಅದನ್ನು ಬಳಸಿಲ್ಲ. ಲೋಕಾಯುಕ್ತ ಫಲಕ ಹಾಕಿರಲಿಲ್ಲ. ಸಿಂಧನೂರ ತಹಸೀಲ್ ಕಚೇರಿಯಲ್ಲಿ ಆರ್‌ಟಿಐ ಅರ್ಜಿ, ತಿದ್ದುಪಡಿ ಹಾಗೂ ಇನ್ನೀತರ ಅರ್ಜಿ ವಿಲೇ ಮಾಡಿಲ್ಲ. ತಹಸೀಲ್ದಾರ್ ಮತ್ತು ಎಡಿಎಲ್ಆರ್ ಮಧ್ಯೆ ಅಸಮನ್ವಯ ಕಾಣಿಸಿತು. ಸಿಂಧನೂರ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ಕೆಲ ವಹಿಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿಲ್ಲ ಎಂದು ತಿಳಿಸಿದರು.

ಅಬಕಾರಿ ಇಲಾಖೆಯಲ್ಲಿ 2020-21ರಿಂದ ಕೆಲ ಅರ್ಜಿಗಳು ಬಾಕಿ ಇರುವುದು ಕಂಡು ಬಂದಿತು. ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಯಾರು ಎಲ್ಲಿಗೆ ಹೋಗುತ್ತಾರೆ ಎಂಬುದರ ಬಗ್ಗೆ ಚಲನವಹಿಯಲ್ಲಿ ದಾಖಲಿಸಿಲ್ಲ. ಕೃಷಿ ಇಲಾಖೆಯಲ್ಲಿ ಮಣ್ಣು ಆರೋಗ್ಯ ಅಭಿಯಾನದ ಅನುದಾನ ಬಳಸಿಲ್ಲ. ಅವಧಿ ಮೀರಿದ ಬೀಜಗಳ ವಿತರಣೆ ಮೇಲೆ ನಿಗಾವಹಿಸಿಲ್ಲ. ಸಿಂಧನೂರ ಕೃಷಿ ಕಚೇರಿಯಲ್ಲಿ ಕೆಲ ರಿಜಿಸ್ಟರ್ ನಿರ್ವಹಣೆ ಸರಿಯಾಗಿಲ್ಲ. ಉಪ ನೋಂದಣಿ ಕಚೇರಿಯಲ್ಲಿ ಅವಧಿ ಮೀರಿದರೂ ಕೆಲ ಅರ್ಜಿಗಳ ವಿಲೇ ಮಾಡದಿರುವುದು ಕಂಡು ಬಂದಿತು ಎಂದು ತಿಳಿಸಿದರು.

ಶಿಕ್ಷಣ ಇಲಾಖೆಯಲ್ಲಿ ನಿವೃತ್ತ ಶಿಕ್ಷಕರ ವೇತನ, ಭತ್ಯೆ ಅರ್ಜಿಗಳನ್ನು ಬಾಕಿ ಇರಿಸಲಾಗಿದೆ. ಲಿಂಗಸೂರ ಬಿಇಓ ಕಚೇರಿಯಲ್ಲಿ ನೊಟೀಸಗಳಿಗೆ ಉತ್ತರ ಕೊಡದ ಪರಿಸ್ಥಿತಿಯಿದೆ. ಈ ಬಗ್ಗೆ ವಿವರವಾದ ವರದಿ ನೀಡಿ ಎಂದು ಡಿಡಿಪಿಐ ಅವರಿಗೆ ಸೂಚಿಸಿದರು.

ಲಿಂಗಸೂರು, ದೇವದುರ್ಗ ಭೂದಾಖಲೆ ಇಲಾಖೆಯಲ್ಲಿ ಸರ್ವೆ ಅರ್ಜಿಗಳ ವಿಲೆ ಸರಿಯಾಗಿ ನಡೆಯುತ್ತಿಲ್ಲ ಎನ್ನುವ ದೂರುಗಳಿದ್ದು, ಈ ಬಗ್ಗೆ ಗಮನ ಹರಿಸಬೇಕು ಎಂದು ಡಿಡಿಎಲ್ಆರ್ ಮತ್ತು ಎಡಿಎಲ್ಆರ್‌ಗಳಿಗೆ ಸೂಚನೆ ನೀಡಲಾಯಿತು.

ಗಬ್ಬೂರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಕೀಯ ಯಂತ್ರಗಳನ್ನು ಬಳಸಿಲ್ಲ. ಹೋಮಿಯೋಪತಿ ಡಾಕ್ಟರ್ ಅಲೋಪತಿಕ್ ಚಿಕಿತ್ಸೆ ಕೊಡುತ್ತಿದ್ದಾರೆ. ಆಸ್ಪತ್ರೆಯಲ್ಲಿ ಶುಚಿತ್ವ ಇಲ್ಲ ಈ ಬಗ್ಗೆ ವರದಿ ಕೊಡಬೇಕು. ನಿಯಮಿತ ವಾಗಿ ಎಲ್ಲ ಆಸ್ಪತ್ರೆಗಳಿಗೆ ಭೇಟಿ ನೀಡಿ ವರದಿ ನೀಡಬೇಕು ಎಂದು ಡಿಎಚ್ಓ ಅವರಿಗೆ ಸೂಚಿಸಿದರು.

ದೇವದುರ್ಗ 3ನೇ ಮತ್ತು 4ನೇ ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿಯರಿಗೆ ಡಿಸೆಂಬರ್ ಮಾಹೆಯಲ್ಲಿ ಪೌಷ್ಠಿಕ ಆಹಾರ ನೀಡಿಲ್ಲ. ರಾಯಚೂರ ಅಂಗನವಾಡಿ ಕೇಂದ್ರವೊಂದರಲ್ಲಿ ದಾಸ್ತಾನು ವಹಿ ನಿರ್ವಹಿಸಿಲ್ಲ. ಯಾವ ಕಡೆಗಳಲ್ಲಿ ಅವ್ಯವಸ್ಥೆ ಇದೆ ಎಂಬುದನ್ನು ಪರಿಶೀಲಿಸಿ ವರದಿ ನೀಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

ಲಿಂಗಸೂರ ಸಮಾಜ ಕಲ್ಯಾಣ ಇಲಾಖೆಯ ವಸತಿಯೊಂದರಲ್ಲಿ ವಿದ್ಯುತ್ ದೀಪ ಇಲ್ಲ. ಬಿಸಿಎಂ ಇಲಾಖೆಯ ಕೆಲ ವಸತಿ ನಿಲಯಗಳಲ್ಲಿ ಲೋಪಗಳು ಇವೆ. ಈ ರೀತಿಯ ಅವ್ಯವಸ್ಥೆಗಳನ್ನು ಸರಿಪಡಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಮತ್ತು ಬಿಸಿಎಂ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸಭೆಯಲ್ಲಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ, ರಾಯಚೂರು ಜಿಲ್ಲಾ ಕರ್ನಾಟಕ ಲೋಕಾಯುಕ್ತದ ಅಧೀಕ್ಷಕರಾದ ಸತೀಶ್ ಎಸ್ ಚಿಟಗುಬ್ಬಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಕ್ಷು ಗಿರಿ, ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಲೋಕಾಯುಕ್ತದ ಡಿವೈಎಸ್ಪಿ ರವಿ ಪುರುಷೋತ್ತಮ ಹಾಗೂ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಸ್ವಾಗತಿಸಿದರು.

## 17 ನೇ ವರ್ಷದ ಅಯ್ಯಪ್ಪ ಸ್ವಾಮಿ ಮಹಾಪೂಜೆ

ಜನವಾದಿ ವಾರ್ತೆ

ಮುದಗಲ್ ಜ 7- ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳಿಂದ 17ನೇ ವರ್ಷದ ಮಹಾಪೂಜೆ, ಕನ್ನಿಪೂಜೆ ಕಾರ್ಯಕ್ರಮ ಪಟ್ಟಣ ಸಮೀಪದ ನಾಗರಹಾಳ ಗ್ರಾಮದಲ್ಲಿ ವಿಜೃಂಭಣೆಯಿಂದ ಜರುಗಿತು.



ಮಹಾಪೂಜೆಯ ನಿಮಿತ್ಯ ಅಯ್ಯಪ್ಪ ಸ್ವಾಮಿಗೆ ವಿವಿಧ ಧಾರ್ಮಿಕ ಪೂಜೆ ವಿಧಿ ವಿಧಾನದಂತೆ ಯಲಗುರುದ ಮಹಾದೇವ ಗುರುಸ್ವಾಮಿಗಳ ದಿವ್ಯ ಸಾನಿದ್ಯದಲ್ಲಿ ಅಯ್ಯಪ್ಪ ಸ್ವಾಮಿಗೆ ಗಂಧದ ಅಭಿಷೇಕ, ತುಪ್ಪದ ಅಭಿಷೇಕ, ವಿವಿಧ ಹೂಗಳಿಂದ ಅಲಂಕಾರ ಮಾಡಿ ಅಲಂಕಾರ ಮಾಡಿ ವಿಶೇಷ ಗಣಹೋಮ ಪೂಜಾ ಕಾರ್ಯ ಜರುಗಿತು. ಮಹಾಪೂಜೆಯ ಅಂಗವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ತೆರೆದ ವಾಹನದಲ್ಲಿ ಅಯ್ಯಪ್ಪ ಸ್ವಾಮಿಯನ್ನು ಅಲಂಕೃತವಾಗಿ ಪ್ರತಿಷ್ಠಾಪಿಸಿ ಮೆರವಣಿಗೆ ಮೂಲಕ ಅಯ್ಯಪ್ಪ ಸ್ವಾಮಿ ಸನ್ನಿಧಿಯತ್ತ ಮಾಲಾಧಾರಿಗಳು ಜಯಘೋಷಗಳೊಂದಿಗೆ ಸಾಗಿದರು.

ಆನೆಹೊಸುರು, ಅಡವಿಭಾವಿ, ಖೈರವಾಡಗಿ, ಲಿಂಗಸಗೂರು, ಮಾವಿನಭಾವಿ, ಸಜ್ಜಲಗುಡ್ಡ ಮತ್ತಿತರ ಗ್ರಾಮಗಳಿಂದ ನೂರಾರು ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳು ಮಹಾಪೂಜೆಯಲ್ಲಿ ಭಾಗಿಯಾಗಿ ಅಯ್ಯಪ್ಪ ಸ್ವಾಮಿ ಕೃಪೆಗೆ ಪಾತ್ರರಾದರು. ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳು ಅನ್ನಸಂತರ್ಪಣೆ ಹಾಗೂ ಅಯ್ಯಪ್ಪ ಸ್ವಾಮಿ ಮೂರ್ತಿಗೆ ವಿಶೇಷ ಅಲಂಕಾರ ಹಾಗೂ ಇತರೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಗುರುಸ್ವಾಮಿಗಳಾದ ಶಂಕರ ಹಾದಿಮನಿ, ಬಸವರಾಜ ಬೈಲಕೂರ, ರಾಜೇಶ ಮೇಟಿ, ಮುಕ್ಕಣ್ಣ ನಂದಿಮನಿ, ದಂಡಪ್ಪ ಮುಕ್ಕಣ್ಣನವರ, ಕರಿಯಪ್ಪ ಬಾದವಾಡಗಿ ಸೇರಿದಂತೆ ನಾಗರಹಾಳ ಗ್ರಾಮದ ಮುಖಂಡರು ಸೇರಿದಂತೆ ಇತರರಿದ್ದರು.

## ಆಯುಷ್ ವೈದ್ಯರಿಂದ ಅಲೋಪತಿ ಚಿಕಿತ್ಸೆ; ಕ್ರಮಕ್ಕೆ ಆಗ್ರಹ



ಜನವಾದಿ ವಾರ್ತೆ

ಲಿಂಗಸುಗೂರು ಜ 7- ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲ ಆಯುಷ್ ಹಾಗೂ ಆಯುರ್ವೇದ ವೈದ್ಯರುಗಳು ಕಾನೂನಿಗೆ ವಿರುದ್ಧವಾಗಿ ಅಲೋಪತಿ ಔಷಧಿ ಮತ್ತು ಹೈಡೋಸ್ ಇಂಜೆಕ್ಷನ್ ನೀಡುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದ್ದು, ಈ ಕುರಿತು ಕ್ರಮ ಕೈಗೊಳ್ಳಬೇಕೆಂದು ಜಯ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ತಾಲೂಕು ಆರೋಗ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಹಟ್ಟಿ, ಮುದುಗಲ್ ಹಾಗೂ ಲಿಂಗಸುಗೂರು ಪಟ್ಟಣಗಳಲ್ಲಿ ಕೆಲವು ಬಿಎಎಂಎಸ್ ಹಾಗೂ ಬಿಹೆಚ್‌ಎಂಎಸ್ ವೈದ್ಯರುಗಳು ತಮ್ಮ ವೃತ್ತಿಗೆ ಸಂಬಂಧಿಸದಂತೆ ಅಲೋಪತಿ ಚಿಕಿತ್ಸೆ. ನೀಡುತ್ತಿದ್ದು, ಕೆಪಿಎಂಇ ಕಾಯ್ದೆಗಳನ್ನು ಉಲ್ಲಂಘಿಸಿ ನೋಂದಣಿ ಇಲ್ಲದೇ ಕ್ಲಿನಿಕ್‌ಗಳನ್ನು ತೆರೆಯಲಾಗಿದೆ. ಅಲ್ಲದೇ ಕೆಲ ಆಸ್ಪತ್ರೆಗಳಲ್ಲಿ ಎರಡುರಿಂದ ನಾಲ್ಕು ಬೆಡ್‌ಗಳವರೆಗೆ ವ್ಯವಸ್ಥೆ ಮಾಡಿಕೊಂಡು ಅಕ್ರಮವಾಗಿ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದು.

ಆಯುಷ್ ಹಾಗೂ ಆಯುರ್ವೇದ ವೈದ್ಯರುಗಳ ಕ್ರಾಸ್ ಪ್ರಾಕ್ಟಿಸ್‌ನಿಂದ ಅಮಾಯಕ ರೋಗಿಗಳ ಆರೋಗ್ಯ ಮತ್ತು ಜೀವಕ್ಕೆ ಅಪಾಯ ಉಂಟಾಗುತ್ತಿದೆ.

ತಾಲ್ಲೂಕಿನಲ್ಲಿ ಅಕ್ರಮವಾಗಿ ಅಲೋಪತಿ ಚಿಕಿತ್ಸೆ ನೀಡುತ್ತಿರುವ ವೈದ್ಯರ ವಿರುದ್ಧ ಕೂಡಲೇ ಪರಿಶೀಲನೆ ನಡೆಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅಗ್ರಹಿಸಿದರು.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಹನುಮಂತ ನಾಯಕ, ಪ್ರಕಾಶ್ ಕುರಿ, ನಿಂಗಪ್ಪ ರಾಮಲೂಟಿ, ಅದಪ್ಪ ಗುರುಗುಂಟ, ಮಲ್ಲೇಶ್, ಮೋಹಿನ್, ಶಿವರೆಡ್ಡಿ, ನಿಂಗರಾಜ, ಅಮರೇಗೌಡ, ಮಂಜುನಾಥ, ಅದಪ್ಪ, ಶಿವರಾಜ ನಾಯಕ ಸೇರಿದಂತೆ ಇನ್ನಿತರರು ಇದ್ದರು.

## ಹೋಬಳಿ ಘಟಕ ಅಧ್ಯಕ್ಷರಾಗಿ ಚನ್ನಪ್ಪ ಭವಾನಿ ನೇಮಕ



ಜನವಾದಿ ವಾರ್ತೆ

ಜಾಲಹಳ್ಳಿ ಜ 7- ಪಟ್ಟಣದ ಪ್ರವಾಸಿ ಮಂದಿರದಲ್ಲಿ ದಲಿತ ಸೇನೆ ಜಾಲಹಳ್ಳಿ ಹೋಬಳಿ ಘಟಕದ ರಚನೆ ಕಾರ್ಯಕ್ರಮ ಬುಧುವಾರ ಜರುಗಿತು.

ದಲಿತ ಸೇನೆ ರಾಜ್ಯಾಧ್ಯಕ್ಷರಾದ ಹನುಮಂತ ಜಿ. ಎಳಸಂಗಿ ಅವರ ನಿರ್ದೇಶನದಂತೆ, ರಾಜ್ಯ ಸಂಘಟನೆ ಕಾರ್ಯದರ್ಶಿ ಜಾವಿದ್ ಖಾನ್ ಹಾಗೂ ರಾಯಚೂರು ಜಿಲ್ಲಾ ಅಧ್ಯಕ್ಷ ಮಾರುತಿ ಚಲವಾದಿ ಅವರ ಆದೇಶದ ಮೇರೆಗೆ ಜಾಲಹಳ್ಳಿ ಹೋಬಳಿ ಘಟಕದ ಅಧ್ಯಕ್ಷರಾಗಿ ಚನ್ನಪ್ಪ ಭವಾನಿ ಅವರನ್ನ ನೇಮಕ ಮಾಡಲಾಗಿದೆ ಎಂದು ತಾಲೂಕ ಅದ್ಯಕ್ಷ ರಂಗನಾಥ ಕೊಂಬಿನ್ ಪತ್ರಿಕೆಗೆ ತಿಳಿಸಿದ್ದಾರೆ.

ಉಪಾಧ್ಯಕ್ಷರಾಗಿ ಹೊನ್ನಪ್ಪ ಮೇದಿನಾಪೂರ ಪ್ರಧಾನ ಕಾರ್ಯದರ್ಶಿ ಯಲ್ಲಪ್ಪ ಗಾಜಲದಿನ್ನಿ, ಸಂಘಟನಾ ಕಾರ್ಯದರ್ಶಿ ಶ್ರೀಕಾಂತ ಪಾಟೀಲ್, ಸಹ ಕಾರ್ಯದರ್ಶಿ ಮೌನೇಶ ಯಲಗಟ್ಟ ಖಜಾಂಚಿಯಾಗಿ ರಮೇಶ ಜಿಡಿ ಅವರನ್ನ ಆಯ್ಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

## ಶಿವಯೋಗಿ ಸಿದ್ಧರಾಮ ಜಯಂತಿ ಆಚರಣೆಗೆ ಸಿದ್ಧತೆಯಾಗಲಿ

ಜನವಾದಿ ವಾರ್ತೆ

ರಾಯಚೂರು ಜ 07 – ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಶಿವಯೋಗಿ ಸಿದ್ಧರಾಮ ಜಯಂತಿಯನ್ನು ಜನವರಿ 14ರಂದು ವಿಜೃಂಭಣೆಯಿಂದ ಆಚ-ರಿಸಲು ಅಗತ್ಯ ಸಿದ್ಧತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳ ಕಚೇರಿಯ ತಹಶೀಲ್ದಾರ್ ಜಗದೀಶ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಜನವರಿ 07ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾ-ರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಶಿವಯೋಗಿ ಸಿದ್ಧರಾಮ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನವರಿ 14ರಂದು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರದಲ್ಲಿ ನಡೆಯುವ ಶಿವಯೋಗಿ ಸಿದ್ಧರಾಮ ಜಯಂತಿಯ ವೇದಿಕೆಯ ಕಾರ್ಯಕ್ರಮಕ್ಕೆ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಅವರು ಮನವಿ ಮಾಡಿದರು. ಅಂದು ಎಲ್ಲಾ ಇಲಾಖೆಗಳ ರಾಯಚೂರು ಜಿಲ್ಲಾ ಹಾಗೂ ರಾಯಚೂರು ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯ ಹಾಜರಿರಬೇಕು ಎಂದು ತಿಳಿಸಿದರು.

ಅಂದು ಬೆಳಗ್ಗೆ 9 ಗಂಟೆಗೆ ನಗರದ ಆಶಾಪೂರು ವೃತ್ತದಿಂದ ನಡೆಯುವ ಮೆರವಣಿಗೆಯ ಮಾರ್ಗದಲ್ಲಿ ಶುಚಿತ್ವ ಕಾಯ್ದುಕೊಳ್ಳಬೇಕು. ನಗರದ ಪ್ರಮುಖ ವೃತ್ತಗಳಲ್ಲಿ ದೀಪಾಲಂಕಾರ ಮಾಡಬೇಕು. ಎಲ್ಲ ಸರಕಾರಿ ಕಚೇ-ರಿಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು ಎಂದು ಸೂಚನೆ ನೀಡಿದರು.

ವೇದಿಕೆಯ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕ್ಕೆ ಏರ್ಪಾಡು ಮಾಡಬೇಕು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕು. ಅಲ್ಲದೆ ಶಿಷ್ಠಾಚಾರಂತೆ ಆಹ್ವಾನ ಪತ್ರಿಕೆ ಮುದ್ರಿಸಿ ಗಣ್ಯರಿಗೆ ವಿತರಿಸಬೇಕು. ಅಂದು ರಂಗಮಂದಿರದ ಆವರಣದಲ್ಲಿ ಕುಡಿಯುವ ನೀರು ಸೇರಿದಂತೆ ಎಲ್ಲಾ ಅಗತ್ಯ ಏರ್ಪಾಡು ಮಾಡಬೇಕು ಎಂದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ, ಸಮಾಜದ ಮುಖಂಡರಾದ ಶಿವರಾಜ, ಹೊನ್ನಪ್ಪ, ಆಂಜೀನಯ್ಯ, ಶಶಿಕಲಾ ಭೀಮರಾಯ, ಯಲ್ಲಪ್ಪ, ದೇವೇಂದ್ರ ಬಿಜ್ಜಾಲಿ, ಲಕ್ಷಣ ಗಾಣಧಾಳ, ಶಿವರಾಜ, ಕೆ.ತಿಮ್ಮಪ್ಪ, ಜಂಬಣ್ಣ, ಈರೇಶ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಅಧಿಕಾರಿಗಳ ದಾಳಿ ದಾಖಲೆಗಳ ಪರಿಶೀಲನೆ

ಅಡಿಯಾಗಿರುವ ತಾಂತ್ರಿಕ ತೊಂದರೆಗಳು,ಸಿಬ್ಬದಿ ಸಮಸ್ಯೆ, ಸ್ವಚ್ಛ ಭಾರತ ಅಭಿಯಾನದಡಿಯಲ್ಲಿ ಶೌಚಾಲಯಗಳ ನಿರ್ಮಾಣ, ಮಕ್ಕಳಿಗೆ ಶೂ.ಸಾಕ್ಸ್ ವಿತರಣೆ, ಸೇರಿದಂತೆ ವಿವಿಧ ವಿಷಯಗಳ ಕುರಿತು ಅಗತ್ಯ ದಾಖಲೆಗಳನ್ನು ಸಂಗ್ರಹಿಸಿ ವರದಿ ನೀಡಲಾಗುವುದು ಲೋಪಗಳು ಕಂಡು ಬಂದಲ್ಲಿ ನೋಟೀಸ್ ನೀಡಲಾಗುವುದು ಹಾಗೂ ಶಿಕ್ಷಣ ಇಲಾಖೆಯ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ವರದಿಯನ್ನು ನೀಡಲಾಗುವುದು ಎಂದು ತಿಳಿಸಿದರು.

ದಾಳಿಯಲ್ಲಿ ಕರ್ನಾಟಕ ಲೋಕಯುಕ್ತ ಸಹಾಯಕರಾದ ನೀಲಕಂಠ ಬಡಿಗೇರ್ ಹಾಗೂ ರವಿ ಭಾಗವಹಿಸಿದರು.

ತಾ.ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಪತ್ರಾಂಕಿತ ವ್ಯವಸ್ಥಪಕರಾದ ಸವಿತಾ ಸೇರಿದಂತೆ ಕಚೇರಿಯ ಸಿಬ್ಬಂದಿಗಳು ಇದ್ದರು.

## ಆಯ್ಕೆ ಸಮಿತಿಗೆ ಪುಸ್ತಕದ ಪ್ರತಿ ಸಲ್ಲಿಸಲು ಜ.31ಕೊನೆಯ ದಿನ

ಜನವಾದಿ ವಾರ್ತೆ

ರಾಯಚೂರು ಜ 07 – ನೋಂದಣಿ ಕಾಯ್ದೆ ಅನ್ವಯ ಪ್ರಕಾಶಕರು 2025 ರಲ್ಲಿ ಮುದ್ರಿಸಿ ಪ್ರಕಟಿಸಿದ ಮೊದಲ ಆವೃತ್ತಿಯ ಪುಸ್ತಕಗಳ 3 ಪ್ರತಿಗಳನ್ನು ರಾಜ್ಯ ಕೇಂದ್ರ ಗ್ರಂಥಾಲಯ ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿಗೆ ಸಲ್ಲಿಸಬೇಕು. ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯು ಅಯ್ಕೆಗಾಗಿ ಸಲ್ಲಿಸಲಾದ 3 ಪ್ರತಿಗಳಲ್ಲಿ ಒಂದನ್ನು ಪರಿಗಣಿಸಲಾಗುತ್ತದೆ.

2025ರಲ್ಲಿ ರಾಜ್ಯದಲ್ಲಿ ಪ್ರಥಮ ಮುದ್ರಣಗೊಂಡು ಪ್ರಕಟಗೊಳ್ಳುವ ಯಾವುದೇ ಭಾಷೆಯ ಪುಸ್ತಕಗಳನ್ನು ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ ಪ್ರತಿ ಶೀರ್ಷಿಕೆ ಮೂರು ಪ್ರತಿಗಳನ್ನು ಮುಫತ್ತಾಗಿ ಸಲ್ಲಿಸಿ ದಿನಾಂಕ: 31-01-2026ರ ಸಂಜೆ 5.30ರ ಒಳಗಾಗಿ ನೋಂದಣಿ ಮಾಡಿಸತಕ್ಕದ್ದು, ನೋಂದಣಿಯಾದ ಪುಸ್ತಕಗಳನ್ನು ಮಾತ್ರ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಪರಿಗಣಿಸಲಾಗುವುದು. ಅಂತಿಮ ದಿನಾಂಕದ ನಂತರ ನೋಂದಣಿಯಾಗುವ ಪುಸ್ತಕಗಳನ್ನು ಆಯ್ಕೆಗಾಗಿ ಪರಿಗಣಿಸಲಾಗುವುದಿಲ್ಲ.

ಹೊರ ರಾಜ್ಯಗಳಲ್ಲಿ 2025ರಲ್ಲಿ ಪ್ರಥಮ ಮುದ್ರಣಗೊಂಡು ಪ್ರಕಟವಾಗುವ ಆಂಗ್ಲ, ಹಿಂದಿ ಅಥವಾ ಯಾವುದೇ ಭಾಷೆಯ ಪುಸ್ತಕಗಳನ್ನು ಆಯಾ ರಾಜ್ಯ ಕೇಂದ್ರ ಗ್ರಂಥಾಲಯಗಳಲ್ಲಿ ಅಥವಾ ಕೇಂದ್ರ/ ಆಯಾ ರಾಜ್ಯ ಸರ್ಕಾರಗಳಿಂದ ಅಧಿಸೂಚಿಸಲ್ಪಟ್ಟ ಅಧಿಕೃತ ಪುಸ್ತಕ ನೋಂದಣಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸಿ, ನೋಂದಣಿ ಪ್ರಮಾಣ ಪತ್ರದ ನಕಲು ಪ್ರತಿಯೊಂದಿಗೆ ಮತ್ತು ಸದರಿ ಪುಸ್ತಕದ ಒಂದು ಪ್ರತಿಯನ್ನು ಆಯ್ಕೆಗಾಗಿ ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ ಸಲ್ಲಿಸತಕ್ಕದ್ದು, ನಿಗದಿತ ದಿನಾಂಕದ ನಂತರ ಸಲ್ಲಿಸುವ ಪುಸ್ತಕಗಳನ್ನು ಸ್ವೀಕರಿಸಲಾಗುವುದಿಲ್ಲ.

ಸಾಹಿತ್ಯ, ಮಕ್ಕಳ ಸಾಹಿತ್ಯ, ಕಲೆ ಮತ್ತು ವಿಜ್ಞಾನ ಪ್ರಕಾರಗಳ ಯಾವುದೇ ಭಾಷೆಯ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಸಲ್ಲಿಸಬಹುದಾಗಿದೆ ಎಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆಯುಕ್ತರಾದ ಬಸವರಾಜೇಂದ್ರ ಹೆಚ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by , Published by, Owned by : basavaraj H , Printed and Published at Basavashree Printers and Publishers, H.No.1-11-54/32, Prashanth Colony, RAICHUR-584101. Editor. BASAVARAJ H